# ಬಂಜಾರ ಸಮುದಾಯ ಮತ್ತು ಧರ್ಮಸಂಕರ

**ಗಂಗಾನಾಯ್ಕ ಎಲ್.[1] & ಅಣ್ಣಮ್ಮ[2]**

[1]ಸಂಶೋಧನಾರ್ಥಿ, ಡಾ.ಡಿ.ವಿ. ಗುಂಡಪ್ಪ ಕನ್ನಡ ಅಧ್ಯಯನ ಕೇಂದ್ರ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.

[2]ಪ್ರಾಧ್ಯಾಪಕರು, ಡಾ.ಡಿ.ವಿ. ಗುಂಡಪ್ಪ ಕನ್ನಡ ಅಧ್ಯಯನ ಕೇಂದ್ರ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.

DOI: https://doi.org/10.5281/zenodo.18816625

**ABSTRACT:**

ಬಂಜಾರ ಬುಡಕಟ್ಟು ಸಮುದಾಯವು ಮೂಲತಃ ಪ್ರಕೃತಿ ಆರಾಧಕ ಹಾಗೂ ಅಲೆಮಾರಿ ಪರಂಪರೆಯನ್ನು ಹೊಂದಿದ್ದು, ಕಾಲಕ್ರಮೇಣ ಸನಾತನ, ಬೌದ್ಧ, ಜೈನ, ಕ್ರೈಸ್ತ, ಇಸ್ಲಾಂ ಮತ್ತು ಸಿಖ್ ಮುಂತಾದ ವಿವಿಧ ಧರ್ಮಗಳೊಂದಿಗೆ ಬೆರೆತು ಧರ್ಮಸಂಕರಗೊಂಡ ಐತಿಹಾಸಿಕ ಪ್ರಕ್ರಿಯೆಯನ್ನು ಇಲ್ಲಿ ವಿಶ್ಲೇಷಿಸಲಾಗಿದೆ. ಭೌಗೋಳಿಕ ವಲಸೆ, ಸಾಮಾಜಿಕ-ಆರ್ಥಿಕ ಸ್ಥಿತ್ಯಂತರಗಳು, ಬಡತನ ಹಾಗೂ ವಸಾಹತುಶಾಹಿ ಕಾನೂನುಗಳು ಈ ಧಾರ್ಮಿಕ ಬದಲಾವಣೆಗಳಿಗೆ ಹೇಗೆ ಕಾರಣವಾದವು ಎಂಬುದನ್ನು ಚಾರಿತ್ರಿಕ ದಾಖಲೆಗಳ ಮೂಲಕ ಮಂಡಿಸಲಾಗಿದೆ. ಮೂಲ ಬುಡಕಟ್ಟು ಸಂಸ್ಕೃತಿಯನ್ನು ಉಳಿಸಿಕೊಂಡೇ ಅನ್ಯ ಧರ್ಮಗಳ ಆಚರಣೆಗಳನ್ನು ಅಳವಡಿಸಿಕೊಂಡಿರುವ 'ಥಾಢಿ'ಗಳಂತಹ ಉಪಪಂಗಡಗಳ ವಿಶಿಷ್ಟ ಅಸ್ಮಿತೆ ಹಾಗೂ ಮತಾಂತರದಿಂದಾಗಿ ಪ್ರಸ್ತುತ ಮೀಸಲಾತಿ ಸೌಲಭ್ಯಗಳ ಮೇಲಾಗುತ್ತಿರುವ ಕಾನೂನಾತ್ಮಕ ಪರಿಣಾಮಗಳನ್ನು ಲೇಖನವು ಸೂಕ್ಷ್ಮವಾಗಿ ಚರ್ಚಿಸುತ್ತದೆ.

**KEYWORDS:**

ಬಂಜಾರ ಬುಡಕಟ್ಟು, ಧರ್ಮಸಂಕರ, ಪ್ರಕೃತಿ ಆರಾಧನೆ, ಸಾಂಸ್ಕೃತಿಕ ಅಸ್ಮಿತೆ, ಐತಿಹಾಸಿಕ ಸ್ಥಿತ್ಯಂತರ.

ಈ ಲೋಕದಲ್ಲಿ ಧರ್ಮ, ಮತ, ಪಂಥಗಳು ಉಗಮವಾಗುವ ಮುಂಚೆ ಆದಿಅಲೆಮಾರಿ ಮಾನವ 'ಪ್ರಕೃತಿಧರ್ಮ'ದ ವಿಸ್ಮಯತೆಗೆ ಚಕಿತಗೊಂಡಿದ್ದಾನೆ. ಕಾಲಾಂತರದಲ್ಲಿ ಮೂಡಿದ ಬ್ರಹ್ಮಾಂಡದ ಆದಿಮೂಲ, ರಚನೆ ಮತ್ತು ವಿಕಾಸದ ಪ್ರಶ್ನೆಗಳಿಗೆ ಉತ್ತರ ಕಾಣದಿದ್ದಾಗ, ಮನುಷ್ಯರಲ್ಲಿ ಈ ವಿಶ್ವದ ಸೃಷ್ಟಿಕರ್ತನೊಬ್ಬನು ಇದ್ದಾನೆಂಬುವ ಮತ್ತು ಬ್ರಹ್ಮಾಂಡದ ಅದ್ಭುತತೆ ಬಗ್ಗೆ ತಾತ್ವಿಕ ಚಿಂತನೆ ಬೆಳೆದಿದೆ. ಸೃಷ್ಟಿಕರ್ತನೆಂಬುವನೆ 'ದೇವರು' ಎಂದೆನಿಸಿಕೊಂಡಿದ್ದಾನೆ. ಮತ್ತೆ ಮುಂದೆ ಏಕದೇವರು ಬಹುದೇವರೆಂಬ ಪ್ರಶ್ನೆ ಮೂಡಿದ್ದು, ಈ ಪ್ರಶ್ನೆಗೆ ಉತ್ತರ ಕಂಡುಕೊಳ್ಳುವ ಹಿನ್ನೆಲೆಯಲ್ಲಿ ತಮ್ಮ ತಮ್ಮ ಅಭಿಪ್ರಾಯ ಮಂಡಿಸಲು ಪ್ರಯತ್ನಿಸಿದವರಿಗೆ ಸಾಕಷ್ಟು

ಅನುಯಾಯಿಗಳು ಹುಟ್ಟಿಕೊಂಡಿದ್ದಾರೆ. ಆಯಾ ಅನುಯಾಯಿಗಳಿಂದ ಜಗತ್ತಿನಲ್ಲಿ ಸಾಕಷ್ಟು ಜನ ಧರ್ಮಸ್ಥಾಪಕರೆನಿಸಿಕೊಂಡಿದ್ದಾರೆ. ಆಯಾ ಧರ್ಮಗಳಲ್ಲಿನ ವಿಭಿನ್ನ ಆಚರಣೆ, ಸಂಪ್ರದಾಯ, ನಂಬಿಕೆಗಳಿಂದಾಗಿ ಲೋಕದಲ್ಲಿ ಹಲವು ಧರ್ಮಗಳು ಪ್ರಸ್ತುತ ಚಾಲ್ತಿಯಲ್ಲಿರುವುದು ಗೊತ್ತಿರುವ ವಿಷಯವೇ ಸರಿ. ಅವುಗಳಲ್ಲಿ ಭಾರತದಲ್ಲಿ ಪ್ರಮುಖವಾಗಿ 1. ಸನಾತನ ಹಿಂದೂಧರ್ಮ, 2. ಬೌದ್ಧ ಧರ್ಮ 3. ಜೈನ ಧರ್ಮ 4. ಕ್ರೈಸ್ತ ಧರ್ಮ 5. ಇಸ್ಲಾಂ ಧರ್ಮ 6. ಸಿಖ್ ಧರ್ಮ 7. ಪಾರ್ಸಿ ಧರ್ಮಗಳಿವೆ.

ದೇಶ-ವಿದೇಶಗಳಲ್ಲಿ ಅವತರಿಸಿದ ಈ ಪ್ರಮುಖ ಧರ್ಮಗಳಲ್ಲಿ ಜನ್ಮಪಡೆದ ಅನೇಕ ಮಹಾಪುರುಷರು, ಮಹಾಮಾತೆಯರು ಕೂಡ ತಮ್ಮ ಆದರ್ಶ ತತ್ವಗಳ ಕಾರಣಕ್ಕೆ ಆ ಧರ್ಮದ ಅನುಯಾಯಿಗಳಿಂದ ಆರಾಧನೆಗೆ ಒಳಗಾಗಿ 'ದೇವರ' ಸ್ಥಾನಮಾನ ಪಡೆದಿರುವುದನ್ನು ಗುರುತಿಸಬಹುದು. ಈ ಧರ್ಮಗಳ ಅನುಯಾಯಿಗಳು ಕಾಲಗರ್ಭದ ಅನೂಹ್ಯ ಕಾರಣಗಳಿಗೆ ಒಂದು ಧರ್ಮದಿಂದ ಮತ್ತೊಂದು ಧರ್ಮಕ್ಕೆ ಸಂಕರಗೊಂಡಿದ್ದಾರೆ. ಹಾಗೆಯೇ ಅತಿ ಪ್ರಾಚೀನ ಚರಿತ್ರೆವುಳ್ಳ ಬಂಜಾರ ಸಮುದಾಯ ಕೂಡ ವಿವಿಧ ಧರ್ಮಗಳಲ್ಲಿ ಸಂಕರಗೊಂಡಿರುವುದು ಸಂಶೋಧನಾತ್ಮಕ ಅಧ್ಯಯನದಿಂದ ಅರಿಯಲಾಗಿದೆ.

ರಾಷ್ಟ್ರಕವಿ ಕುವೆಂಪು ಹೇಳುವ ಹಾಗೆ ಧರ್ಮ 'ಮನುಜಮತ ವಿಶ್ವಪಥ' ಆಗಬೇಕಿದೆ. ಧರ್ಮಗಳು ವೈಚಾರಿಕ ತಳಹದಿ ಮೇಲೆ ನಿಂತು 'ಮಾನವಧರ್ಮ'ವನ್ನು ಕಟ್ಟಬೇಕಿದೆ. ದುರದೃಷ್ಟ ಎಂದರೆ ಕಾರ್ಲ್ಮಾರ್ಕ್ಸ್ ಹೇಳುವ ಹಾಗೆ "ಧರ್ಮವೆಂಬುದು ಅಫೀಮು ಇದ್ದ ಹಾಗೆ" ಎನ್ನುವ ಮಾತು ಪ್ರಸ್ತುತ ಸತ್ಯವಾಗಿ, ಶಾಂತ ಸಮಾಜಕ್ಕೆ ನೆಮ್ಮದಿಯಿಲ್ಲವೆನ್ನುವಂತಾಗಿದೆ. 'ಧರ್ಮ' ಎಂಬ ಪದದರ್ಥ ಆಯಾ ಧರ್ಮದ ಅನುಯಾಯಿಗಳಲ್ಲಿ ವಿಭಿನ್ನ ವ್ಯಾಖ್ಯೆಗಳಿಗೆಡೆಮಾಡಿಕೊಟ್ಟಿದ್ದು, ಧಾರ್ಮಿಕ ಗುಂಪುಗಳು ಏಕಪಕ್ಷದಲ್ಲಿ ನಿರತವಾಗಿವೆ. ಈ ಕಾರಣಕ್ಕೆ ಪ್ರಸ್ತುತ ಸಮಾಜ ವಿವಿಧ ಭಿನ್ನ ಧಾರ್ಮಿಕ ಸಂಪ್ರದಾಯವಾದಿ ಮತ್ತು ವಿಚಾರವಾದಿಗಳ ನಡುವಿನ ತಿಕ್ಕಾಟದಲ್ಲಿ ಮುಳುಗಿದೆ.

'ಧರ್ಮ' ಪದಕ್ಕೆ ಇಂಗ್ಲೀಷ್‌ನಲ್ಲಿ 'Religion' ಎಂಬ ಪದವಿದೆ. 'Religion' ಎಂಬ ಪದವು ಲ್ಯಾಟಿನ್ ಭಾಷೆಯ 'Religare, Religio' ಪದಗಳಿಂದ ಬಂದಿದೆ. ಇದರ ಅರ್ಥ 'To bind', 'Obligation' ಅಂದರೆ ಬಂಧಿಸಲು, ಕಟ್ಟು, ಕಟ್ಟುಪಾಡು ಎಂಬರ್ಥವಿದೆ. ಕನ್ನಡದಲ್ಲಿ 'ಧರ್ಮ' ಪದಕ್ಕೆ ಸಂವಾದಿಯಾಗಿ ಮತ, ಭಕ್ತಿ, ದೈವನಿಷ್ಠೆ, ಮತಶ್ರದ್ಧೆ ಇತ್ಯಾದಿ ಪದಗಳಿಂದ ಕರೆಯುವುದುಂಟು. ಧರ್ಮ ಎಂದರೇನು? ಎಂಬ ಪ್ರಶ್ನೆಗೆ ಹೆಚ್ಚಾಗಿ ವಿದ್ವಾಂಸರು, ತತ್ವಜ್ಞಾನಿಗಳು 'ಉತ್ತಮ ಗುಣ' ಎಂದು ಅಭಿಪ್ರಾಯಪಡುತ್ತಾರೆ.

ಜಗತ್ತಿನಲ್ಲಿ ರಂಗುರಂಗಿನ ಸಾಂಸ್ಕೃತಿಕಲೋಕವುಳ್ಳ ಬಂಜಾರ ಸಮುದಾಯದ ಬೇರು 'ಪ್ರಾಚೀನ ನಾಗರಿಕತೆ' ಕಾಲದವರೆಗೆ ಕೊಂಡೊಯ್ಯುತ್ತದೆ. ವೃತ್ತಿಯಿಂದ ಅಲೆಮಾರಿ ವ್ಯಾಪಾರಿಗಳಾಗಿದ್ದ ಕಾರಣಕ್ಕೆ ದೇಶ-ವಿದೇಶಗಳಲ್ಲೂ ಹರಡಿಕೊಂಡಿದ್ದಾರೆ. ಚದುರಿದಲ್ಲಲ್ಲಿಯೇ ಪ್ರತ್ಯೇಕ 'ತಾಂಡ'ಗಳನ್ನು ಕಟ್ಟಿಕೊಂಡು ಬದುಕನ್ನು

ಕಟ್ಟಿಕೊಂಡಿದ್ದಾರೆ. ಈ ಬಂಜಾರ ಸಮುದಾಯದವರು ಆಯಾ ಕಾಲಕ್ಕೆ ಹುಟ್ಟಿಕೊಂಡ ಹಲವು ಧರ್ಮಗಳಲ್ಲಿ ಸಂಕರಗೊಂಡಿರುವುದನ್ನು ಗುರುತಿಸಬಹುದು. ಭಾರತದಲ್ಲಿ 'ಸಂವಿಧಾನ' ಜಾರಿಗೊಂಡು, ಸರ್ವರಿಗೂ ಅವರವರ ಧರ್ಮವನ್ನು ಪಾಲನೆ ಮಾಡುವ ಧಾರ್ಮಿಕ ಹಕ್ಕು ಪಡೆದಿದ್ದಾಗ್ಯೂ, ಅನೇಕ ಕಾರಣಗಳಿಂದ ಜನರು ಸ್ವತಃ ತಾವೇ ಬೇರೆ ಬೇರೆ ಧರ್ಮಗಳನ್ನು ಸ್ವೀಕರಿಸುತ್ತಿದ್ದಾರೆ. ಈ ರೀತಿ ಧರ್ಮಸಂಕರಗೊಳ್ಳುತ್ತಿರುವ ಹಲವು ಬುಡಕಟ್ಟು ಸಮುದಾಯಗಳ ಪೈಕಿ ಬಂಜಾರ ಬುಡಕಟ್ಟು ಸಮುದಾಯ ಒಂದಾಗಿದೆ.

**ಸನಾತನ ಧರ್ಮ**

ಒಂದೇ ನಾಣ್ಯದ ಎರಡು ಮುಖದಂತಿರುವ 'ಹಿಂದೂ ಧರ್ಮ' ಅಥವಾ 'ಸನಾತನ ಧರ್ಮ'ಕ್ಕೆ ಅತಿ ಪ್ರಾಚೀನತೆ ಇದೆ. ಈ ಕಾರಣಕ್ಕೆ ಜಗತ್ತಿನ ತಳಮೂಲ ಧರ್ಮವೆಂದು ಕರೆಯುತ್ತಾರೆ. ಇಲ್ಲಿ ಶಾಕ್ತ, ವೈಷ್ಣವ, ಸ್ಮಾರ್ತ, ಶೈವ ಮತ್ತು ವೈಚಾರಿಕವಾದಿ ಪಂಥದವರಿದ್ದಾರೆ. ಜೊತೆಗೆ ಪ್ರಕೃತಿ ಆರಾಧಕರು ಇದ್ದಾರೆ. ಇಲ್ಲಿಂದ ಅನ್ಯ ಧರ್ಮದ ಕಡೆ ಮುಖಮಾಡಿ ಸಂಕರಗೊಂಡಿದ್ದಾರೆ. ಅನ್ಯ ಧರ್ಮಕ್ಕೆ ಹೋದವರು ವಾಪಸ್ಸು ಸನಾತನ ಧರ್ಮಕ್ಕೆ ಹಿಂತಿರುಗಿದ್ದು ತುಂಬಾ ಕಡಿಮೆ. ಹೊಸ ಹೊಸದಾಗಿ ಉದಯಗೊಂಡ ಧರ್ಮಗಳಲ್ಲಿ ಸಂಕರಗೊಂಡು ಕೂಡ ತಮ್ಮ ಮೂಲ ಬುಡಕಟ್ಟುತನವನ್ನು ಹಾಗೆಯೇ ಉಳಿಸಿಕೊಂಡು ಬಂದವರ ಪೈಕಿ ಬಂಜಾರ ಬುಡಕಟ್ಟು ಸಮುದಾಯ ಕೂಡ ಒಂದು. ಬಂಜಾರ ಸಮುದಾಯ ಆರ್ಯ ಜನಾಂಗ ಮೂಲದವರು ಎಂದು ಗುರ್ತಿಸಿಕೊಂಡಿದ್ದಾರೆ.

ಋಗ್ವೇದ (ಕ್ರಿ.ಪೂ. 1500 ದಿಂದ ಕ್ರಿ.ಪೂ. 1000) ಮತ್ತು ಉತ್ತರ ವೈದಿಕಕಾಲ(ಕ್ರಿ.ಪೂ 1000–600)ದ ನಾಲ್ಕು ವೇದಗಳ ಕಾಲದ ನಾಗರಿಕರ ಜೀವನವನ್ನು ನೋಡಿದರೆ, ಋಗ್ವೇದದ ಆರ್ಯರು ಇಂದ್ರ, ವರುಣ, ಅಗ್ನಿ, ಸೋಮ ಎಂಬ ಸಸ್ಯ ದೇವತೆ, ಸೂರ್ಯ, ಚಂದ್ರ ನಕ್ಷತ್ರ, ವಿಷ್ಣು, ಯಮ, ಪ್ರಕೃತಿಯನ್ನು ಆರಾಧಿಸುತ್ತಿದ್ದರು. ಬಂಜಾರರ ಸಂಸ್ಕೃತಿಯನ್ನು ಸೂಕ್ಷ್ಮವಾಗಿ ಅಧ್ಯಯನಕ್ಕೆ ಒಳಪಡಿಸಲಾಗಿ ಇವರು ಪ್ರಕೃತಿಯ ಆರಾಧಕರು. ಸೂರ್ಯ, ಭೂಮಿ, ಆಕಾಶ ಅಗ್ನಿ, ವರುಣ, ಮರ–ಗಿಡ, ಸಸಿಗಳನ್ನು ಆರಾಧನೆ ಮಾಡುತ್ತಾರೆ. ಇದು ಈಗಲೂ ಭಾಗಶಃ ಮುಂದುವರೆದಿದೆ. ಆಧುನಿಕ ಕಾಲದ ಸಂಸ್ಕೃತೀಕರಣದ ಪ್ರಭಾವ–ಪ್ರೇರಣೆಗೆ ಒಳಗಾಗಿ ಪ್ರಕೃತಿಯ ಆರಾಧನೆಯಿಂದ ರೂಪಾಂತರಗೊಂಡಿದ್ದಾರೆ. ಹಾಗಂತ ಸಂಪೂರ್ಣವಾಗಿಲ್ಲ. ಪ್ರಕೃತಿ ಆರಾಧನೆಗೆ ಉದಾ: ತೀಜ್ ಹಬ್ಬ, ಭೋಗ್(ಅಗ್ನಿ ಪೂಜೆ), ಗಂಗಮ್ಮ ಪೂಜೆ, ಮುಂಜಾನೆ ಸೂರ್ಯ ನಮಸ್ಕಾರ(ಕೈ–ಕಾಲು ತೊಳೆದು ನೀರು ತುಂಬಿದ ಚರಿಗೆ ಹಿಡಿದು ಸೂರ್ಯ ನಮಸ್ಕಾರ ಮಾಡುವುದು) ಇತ್ಯಾದಿ.

ವೇದಗಳ ಕಾಲದ ಜನಸಾಮಾನ್ಯ ಆರ್ಯಬುಡಕಟ್ಟು ತಂಡಗಳಿಗೆ ಒಬ್ಬ ನಾಯಕ ಅಥವಾ ರಾಜನಿರುತ್ತಿದ್ದನು. ಮೊದಮೊದಲು 'ನಾಯಕ' ಪರಂಪರೆಯಿದ್ದು, ಮುಂದೆ 'ರಾಜ' ಪರಂಪರೆಯಾಗಿ ಮಾರ್ಪಟ್ಟಿದೆ. ಆರ್ಯರ 'ನಾಯಕ' ಪರಂಪರೆ

ಬಂಜಾರ ಸಮುದಾಯದಲ್ಲಿದೆ. ಪ್ರಸ್ತುತ ಪ್ರತಿ ತಾಂಡಗಳಲ್ಲಿ ನಾಯಕ, ನಾಯಕ್ ಎಂಬ ವ್ಯವಸ್ಥೆಯಿದ್ದು, ಜೊತೆಗೆ ಕಾರ್ಭಾರಿ(ಕಾರ್ಯದರ್ಶಿ) ಡಾವ್ಹೋ(ಹಿರಿಯ ಸದಸ್ಯ) ಎಂಬ ಸದಸ್ಯರ ತಂಡ ಇರುತ್ತದೆ. ಇವರಲ್ಲಿ 'ನಾಯಕ್' ತಂಡದ/ತಾಂಡದ ಮುಖ್ಯಸ್ಥನಾಗಿರುತ್ತಾರೆ. ಇವರನ್ನು ಬಂಜಾರರ ಏಳು ತಂಡದ/ತಾಂಡದ ಮುಖ್ಯಸ್ಥರು ಸೇರಿ ಪದ್ಧತಿ ರೀತಿ ತುಂಬಾ ಸಂಭ್ರಮದೊಂದಿಗೆ ಪಟ್ಟಕಟ್ಟುತ್ತಾರೆ.

ಋಗ್ವೇದದಲ್ಲಿ ಆರಾಧನೆಮಾಡುವ ಸೋಮ ಸಸ್ಯದೇವತೆಯನ್ನು ಬಂಜಾರರು ಆರಾಧನೆ ಮಾಡುತ್ತಿರುವುದು ಎಲ್ಲಿಯೂ ಕಂಡುಬರುವುದಿಲ್ಲ. ಆದರೆ ಕಾಡಿನಲ್ಲಿ ಸಿಗುವ 'ಸೋಮ ಸಸ್ಯ'ದಂತಹ ಸಸ್ಯದ ಚೆಕ್ಕೆ ತೆಗೆದು ಅದನ್ನು ಒಣಗಿಸಿ, ಕುಟ್ಟಿ ಪುಡಿ ಮಾಡಿ ಬೆಲ್ಲದೊಂದಿಗೆ ಮಡಿಕೆಯಲ್ಲಿ ವಾರಗಳ ಕಾಲ ನೆನೆಯಿಟ್ಟು, ಮದ್ಯವನ್ನು ಭಟ್ಟಿ ಇಳಿಸಿ ಮನೆ ಮಂದಿ ಸೇರಿ ಕುಡಿಯುವ ಪದ್ಧತಿ ಬಂಜಾರರಲ್ಲಿ ಪ್ರಾಚೀನ ಕಾಲದಿಂದಲೂ ಇದೆ.

ಸಾಮವೇದವು ಸೋಮಬಲಿಯ ಸಂದರ್ಭದಲ್ಲಿ ಹಾಡುತ್ತಿದ್ದ ಸಂಗೀತ. ಬಂಜಾರ ಸಮುದಾಯ ಕೂಡ ಮದ್ಯವನ್ನು ಸೇವನೆ ಮಾಡಿದ ಮೇಲೆ ಎಲ್ಲರೂ ಸೇರಿ ಜನಪದ ಹಾಡನ್ನು ಹಾಡುವ ಪದ್ಧತಿಯಿದೆ. ಇಲ್ಲಿ ಇಡೀ ತಾಂಡದ ಹಿರಿಯರು ತಂದೆ-ಮಕ್ಕಳು, ಗಂಡ-ಹೆಂಡತಿ ಸೇರಿ (ಮದ್ಯ)ಸೋಮರಸವನ್ನು ತೆಗೆದುಕೊಳ್ಳುವ ಪದ್ಧತಿ ಈಗಲೂ ಇದೆ.

ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ರವರ ಉಲ್ಲೇಖದ ಪ್ರಕಾರ "ಪುಲಿಕೇಶಿ ಮತ್ತು ಹರ್ಷ ಇವರ ಮರಣದೊಂದಿಗೆ, ರಜಪೂತರ ಕಾಲ, ಆಳ್ವಿಕೆ ಸುಮಾರು ಕ್ರಿ.ಶ 650ರಿಂದ ಪ್ರಾರಂಭವಾಯಿತು. ಕ್ರಿ.ಶ 1000ಕ್ಕೆ ಕೊನೆಗೊಳ್ಳುತ್ತದೆ. ರಜಪೂತರ ಒಂದೇ ರಾಜ್ಯ ಇರಲಿಲ್ಲ. ಬಹುಸಂಖ್ಯೆಯಲ್ಲಿ ಇದ್ದವು. ಅವರೆಲ್ಲರೂ ಸಾಂಕೇತಿಕವಾಗಿ ಹಿಂದೂಗಳಾಗಿದ್ದರು. ಏಕೆಂದರೆ, ಅವರ ವಂಶದ ಮೂಲಪುರುಷರು ಔತ್ತರೇಯ ದಾಳಿಕಾರರು ಅಥವಾ ಹಿಂದೂ ಮೂಲವಲ್ಲದ ಪ್ರಾಚೀನ ಬುಡಕಟ್ಟುಗಳಿಗೆ ಸಂಬಂಧಿಸಿದವರು" ಎನ್ನುವ ಚಾರಿತ್ರಿಕ ಹೇಳಿಕೆ ಬಂಜಾರರ ಸೋದರ ಸಂಬಂಧಿ ಸಮುದಾಯಗಳ ಪೈಕಿ ರಜಪೂತರ ಚರಿತ್ರೆಯ ಜೊತೆ ಬಂಜಾರ ಬುಡಕಟ್ಟು ಸಮುದಾಯದ ಇತಿಹಾಸದ ಬೆಳಕಿನ ಎಳೆಯನ್ನು ಗುರುತಿಸಬಹುದು. ರಜಪೂತ, ಗುರ್ಜರ, ಮರಾಠ ಇನ್ನೂ ಮುಂತಾದವರು ಬಹಳ ಬೇಗ 'ಹಿಂದೂ ಧರ್ಮ'ದ ಪರಂಪರೆಯ ಹಾದಿತುಳಿದರೆ, ಬಂಜಾರರು ಮಾತ್ರ ಸರಿಸುಮಾರು 18ನೇ ಶತಮಾನದವರೆಗೆ 'ಸನಾತನಿ ಧರ್ಮ'ವನ್ನು ಪಾಲನೆ ಮಾಡಿಕೊಂಡು ಬಂದಿದ್ದಾರೆ. ಸನಾತನಿಗಳೆಲ್ಲರನ್ನೂ ಭಾರತದಲ್ಲಿ ಹಿಂದೂ ಧರ್ಮದವರೆಂದು ಗುರುತಿಸಿರುವ ಕಾರಣ ಬಂಜಾರರನ್ನು ಅನೇಕ ಇತಿಹಾಸಕಾರರು ಹಿಂದೂ ಧರ್ಮದವರು ಎಂದು ಕರೆದಿದ್ದಾರೆ. ಆದರೆ ಡಾ. ಬಿ.ಆರ್ ಅಂಬೇಡ್ಕರ್‌ರವರ ಈ ಮೇಲಿನ ಹೇಳಿಕೆ ಬಂಜಾರರು ಸ್ವತಂತ್ರ ಮೂಲಬುಡಕಟ್ಟು ಸಮುದಾಯಕ್ಕೆ ಸೇರಿರುವವರು ಎಂದು ಹೇಳಲಿಕ್ಕೆ ದಾರಿ ಮಾಡಿಕೊಡುತ್ತದೆ.

ಆಯಾ ಕಾಲದ ಸ್ಥಾಪಿತ ಧರ್ಮದ ಗೋಜಿಗೆ ಹೋಗದ ಬಂಜಾರ ಸಮುದಾಯದ ಕೆಲವು ಗುಂಪುಗಳು ಸನಾತನ ಧರ್ಮದ ಶಾಕ್ತ, ವೈಷ್ಣವ, ಶೈವ ಪಂಥದ ಪರಂಪರೆಯಲ್ಲಿ ಗುರುತಿಸಿಕೊಳ್ಳುತ್ತಾರೆ. ಉದಾ: ಸಾತಿಭವಾನಿ (ಮರಿಯಮ್ಮ, ತೋಳಜಾ, ಕಂಕಾಳಿ, ಧೋಳಾಂಗರ್, ಮತ್ರಾಲ್, ಇಂಗಳಾ, ಚಾಮಡ್/ಚಾಮುಂಡಿ) ಶಿವ, ಕೃಷ್ಣ, ಗೋವಿಂದ, ಗಣೇಶ, ಆಂಜನೇಯ, ಲಕ್ಷ್ಮಿ, ಸರಸ್ವತಿ, ಇತ್ಯಾದಿ. 'ಸನಾತನಿ' ಬಂಜಾರ ಸಮುದಾಯ ಸದಾ ಅಲೆಮಾರಿ ಜೀವನ ನಡೆಸಿಕೊಂಡು ಕಾಡು–ಮೇಡುಗಳಲ್ಲಿದ್ದುದ್ದಲ್ಲದೆ, ಎಲ್ಲಾ ಸಮುದಾಯಗಳ ಜೊತೆ ವ್ಯಾಪಾರ ವಹಿವಾಟು ನಡೆಸುತ್ತಿದ್ದ ಕಾರಣ, ಎಲ್ಲಾ ಧರ್ಮ–ಜಾತಿಗಳ ಜೊತೆ ಬೆರೆತು ಬದುಕನ್ನು ಕಟ್ಟಿಕೊಂಡಿದ್ದು, ಸನಾತನಿ ಪರಂಪರೆಯೊಂದಿಗೆ ಗುರುತಿಸಿಕೊಂಡಿದೆ. ಕ್ಷತ್ರಿಯ ಪರಂಪರೆಯಲ್ಲಿ ಹುಟ್ಟಿದ ಸತೀಸಹಗಮನ ಪದ್ಧತಿ ಸಮಾಜಪೂರ್ತಿ ಹರಡಿಕೊಂಡಿದ್ದು, ಬಂಜಾರ ಸಮುದಾಯದಲ್ಲೂ ಸತೀಸಹಗಮನ ಪದ್ಧತಿ ಆಚರಣೆ ಕಂಡುಬರುತ್ತದೆ. ಉದಾ: ಸೀತಾಸತಿ, ಭೀಮಾಸತಿ, ಹೂನಾಸತಿ ಇತ್ಯಾದಿಗಳನ್ನು ಆರಾಧಿಸುತ್ತಾರೆ.

1881–1901ರ ಜನಗಣತಿಯು ಲಂಬಾಣಿಗರನ್ನು ಹಿಂದೂಗಳ ಪಟ್ಟಿಗೆ ಸೇರಿಸಿತ್ತು. ಆದರೆ 1911ರ ಜನಗಣತಿಯಲ್ಲಿ ಕೆಲವೊಬ್ಬರು ಪ್ರಕೃತಿ ಆರಾಧಕರು (ಅನಿಮಿಸ್ಟ್) ಎಂದು ವರ್ಗೀಕರಿಸಲಾಯಿತು. ಬಂಜಾರರು ಹಿಂದೂ ಧರ್ಮದ ಪರದೆಯಲ್ಲಿದ್ದರೂ ಸಹ ಅವರು 'ಸನಾತನ ಧರ್ಮ'ದ ಮೂಲತತ್ವಗಳನ್ನು ಪಾಲಿಸುತ್ತಿದ್ದಾರೆ. ಈಗಲೂ ಬಂಜಾರ ಬುಡಕಟ್ಟು ಸಮುದಾಯ ಪ್ರಕೃತಿತತ್ವದ ಸನಾತನಿಗಳ ಸಂಸ್ಕೃತಿಯನ್ನು ಆಚರಿಸುವ ಕಾರಣ ಅವರನ್ನು ಪ್ರಕೃತಿ ಆರಾಧಕ ಸನಾತನ ಧರ್ಮದವರು ಎಂದು ಗುರುತಿಸುವುದು ಸರಿ ಹೊಂದುತ್ತದೆ.

ಬಂಜಾರ ಸಮುದಾಯದ ಕೆಲವು ಮೂಲ ಗುಂಪುಗಳು ಸನಾತನಿ ಧರ್ಮದ ಅಸ್ಮಿತೆಯನ್ನು ಉಳಿಸಿಕೊಂಡು ಬಂದರೆ, ಬಂಜಾರರ ಕೆಲವು ಗುಂಪುಗಳು ಆಯಾ ಉತ್ತುಂಗಕಾಲದ ಪ್ರಸಿದ್ಧ ಧರ್ಮಗಳ ಜೊತೆ ಸಂಕರಗೊಂಡಿದ್ದಾರೆ. ವಿವಿಧ ಧರ್ಮಗಳ ಜೊತೆ ಬಂಜಾರ ಸಮುದಾಯ ಪ್ರತಿಕ್ರಿಯಿಸಿರುವುದನ್ನು, ಸಂಕರಗೊಂಡಿರುವುದನ್ನು ಇಲ್ಲಿ ಗುರುತಿಸಲಾಗಿದೆ.

**ಬೌದ್ಧ ಧರ್ಮ**

ಕ್ರಿ.ಪೂ. 6ನೇ ಶತಮಾನದಲ್ಲಿ ಅಖಂಡ ಭಾರತದಲ್ಲಿ ಸುಮಾರು 62ಕ್ಕೂ ಹೆಚ್ಚು ಹೊಸ ಅಸಾಂಪ್ರದಾಯಿಕ ಧರ್ಮಗಳು ಉಗಮಗೊಂಡಿವೆ. ಇವು ಸನಾತನಕಾಲದಿಂದಲೂ ಇದ್ದ, ಮೌಢ್ಯಗಳನ್ನು, ಅತಿರೇಕದ ಅಂಧಾಚರಣೆ, ನರಬಲಿ, ಕಠಿಣ ವರ್ಣವ್ಯವಸ್ಥೆ ಆಚರಣೆ, ಸಾಮಾನ್ಯ ಜನರಿಗೆ ಅರ್ಥವಾಗದ ಸಂಸ್ಕೃತವನ್ನು ವಿರೋಧಿಸಿ ಏಳಿಗೆಗೆ ಬಂದವು. ಅವುಗಳ ಪೈಕಿ ಬೌದ್ಧ ಮತ್ತು ಜೈನ ಧರ್ಮಗಳು ಪ್ರಮುಖವಾಗಿವೆ.

ಗೌತಮಬುದ್ಧನಿಂದ(ಕ್ರಿ.ಪೂ. 563–483) ಬೌದ್ಧಧರ್ಮ ಸ್ಥಾಪನೆಯಾಯಿತು.

ಬುದ್ಧ ಆರ್ಯ ಬುಡಕಟ್ಟಿನ ಶಾಕ್ಯ ಕ್ಷತ್ರಿಯ ಕುಲದ ಕಪಿಲ ವಸ್ತುವಿನ ರಾಜನಾಗಿದ್ದನು. ಡಿ.ಡಿ ಕೋಸಂಬಿ ಪ್ರಕಾರ "ಶಾಕ್ಯರು ಆರ್ಯ ಮೂಲದವರು ಎನ್ನುವುದಕ್ಕೆ ಸಾಧ್ಯವಿದೆ. ಶಾಕ್ಯರಲ್ಲಿ ಜಾತಿ ಅಥವಾ ವರ್ಗಗಳ ಭೇದ ಇರಲಿಲ್ಲ. ಅವರಲ್ಲಿ ಬ್ರಾಹ್ಮಣರೂ ಇರಲಿಲ್ಲ." ಬುದ್ಧ ಸಾಂಸಾರಿಕ ಜೀವನದಲ್ಲಿ ವಿರಕ್ತಿ ಹೊಂದಿದ ನಂತರ ತಪಸ್ಸು ಮಾಡಿ ಜ್ಞಾನೋದಯವನ್ನು ಪಡೆದನು. ನಂತರ ತನ್ನ ಬೌದ್ಧಧರ್ಮದ ತತ್ತ್ವಗಳನ್ನು ಬೋಧಿಸಿದನು.

ಬುದ್ಧನು ತೀರಿಕೊಂಡ ಮೇಲೆ ಒಟ್ಟು ನಾಲ್ಕು 1. ಕ್ರಿ.ಪೂ. 483 ರಾಜಗೃಹದಲ್ಲಿ 'ಮಹಾಕಶ್ಯಪ' 2. ಕ್ರಿ.ಪೂ. 383 ವೈಶಾಲಿಯಲ್ಲಿ 'ಸುಬ್ಬಕಾಮಿ' 3. ಕ್ರಿ.ಪೂ. 252 ಅಶೋಕನ ಕಾಲ ಪಾಟಲೀಪುತ್ರದಲ್ಲಿ 'ಮೊಗ್ಗಲಿಪುತ್ತ ತಿಸ್ಸ' 4. ಕಾಶ್ಮೀರದಲ್ಲಿ ಕುಂಡಲೀವನದಲ್ಲಿ ಕ್ರಿ.ಶ 1&2ನೇ ಕಾನಿಷ್ಕನ ಆಳ್ವಿಕೆ ವಸುಮಿತ್ರ ಮತ್ತು ಅಶ್ವಘೋಷರ ಅಧ್ಯಕ್ಷತೆಯಲ್ಲಿ ಬೌದ್ಧ ಸಮ್ಮೇಳನಗಳು ಜರುಗಿದವು. ಬೌದ್ಧ ಧಾರ್ಮಿಕ ತತ್ವಗಳನ್ನು ಪಾಲಿ ಭಾಷೆಯಲ್ಲಿ ಸಂಗ್ರಹಿಸಿ 'ತ್ರಿಪಿಟಕ'ಗಳೆಂದು ಕರೆಯಲಾಯಿತು. ಉಪಾಲಿಯು 'ವಿನಯಪಿಟಕ' ಆನಂದನು 'ಸುತ್ತಪಿಟಕ' ವನ್ನು ಸಂಗ್ರಹಿಸಿದರು. ಕೊನೆ ಸಮ್ಮೇಳನದಲ್ಲಿ ಬುದ್ಧನ ಪಾದ ಮತ್ತು ಕಮಲ ಪೂಜಿಸುವ ಹೀನಯಾನ ಮತ್ತು ಬುದ್ಧನ ಮೂರ್ತಿಯನ್ನು ಪೂಜಿಸುವ ಮಹಾಯಾನ ಎಂಬ ಪಂಥಗಳಾಗಿ ವಿಭಜಿತವಾದವು.

ಬಂಜಾರ ಬುಡಕಟ್ಟು ಸಮುದಾಯದ ಮೂಲನೆಲೆಯ ಚರಿತ್ರೆಯನ್ನು ಗುರುತಿಸುವಲ್ಲಿ ರಾಜಸ್ಥಾನ, ಆಫ್ಘಾನಿಸ್ಥಾನದಲ್ಲಿರುವ 'ಗೋರ' ಪ್ರದೇಶದವರೆಗೆ ವಿಸ್ತರಿಸುತ್ತದೆ. 'ಗೋರುಸ್ತಾನ್' ಮುಂದೆ ಗುರ್ಜಿಸ್ತಾನ್ ಆಗಿದೆ. ಈಗಲೂ ಅಲ್ಲಿ 'ಗೋರ್' ಎಂಬ ನದಿ ಕೂಡ ಇದೆ. ಗೋವಿಂದ ರಾಥೋಡ್ ರವರು 'Ancient History of Gor Banjaras'ರಲ್ಲಿ "The kingdom of Gorvamshiya group was extended up to Kabul Gagni's mountainous region in North–south of Hirat for many years before Christ. Hence the mountain ranges in the region are known as Gor region even today. Gorvamshiya tribes still live in this region. The costumes of women here also like the Banjara women." ಎಂದು ಉಲ್ಲೇಖಿಸಿದ್ದಾರೆ. ಮುಂದುವರೆದು ಶ್ರೀ ರಾಹುಲ್ ಸಾಂಕೃತ್ಯಾಯನ್–'ಮಧ್ಯ ಏಷ್ಯಾದ ಇತಿಹಾಸ'(ಪುಟ–433–439) ದಲ್ಲಿ 'ಗೋರ್' ರಾಜರ ಕುರಿತು ವಿವರಿಸುವಾಗ ಅವರ ಪ್ರದೇಶದ ಜನರು 'ಕಾಫೀರ್'(ನಾನ್‌ಮುಸ್ಲಿಂ) ಆಗಿದ್ದರು. ಈ ಕಾಪಿರ್‌ಗಳು ಬುದ್ಧಿಸ್ಟ್ ಅಥವಾ ಹಿಂದೂಗಳಾಗಿದ್ದರು. ಸರಿಸುಮಾರು 10ನೇ ಶತಮಾನದವರೆಗೆ. ಮುಂದುವರೆದು ಹಿಜರಿ ಶಕೆ 401(ವರ್ಷ 1001)ರಲ್ಲಿ 'ಗೋರ್' ಸೈನ್ಯದ ಮೇಲೆ ಆಕ್ರಮಣ ಮಾಡಲಾಯಿತು ಎಂದು ವಿವರಿಸಲಾಗಿದೆ.

ಡಾ. ಸುನೀತ್‌ಕುಮಾರ್ ಚಟರ್ಜಿ–'ಭಾರತೀಯ ಆರ್ಯನ್ ಭಾಷಾ ಮತ್ತು

ಹಿಂದಿ' (ಪುಟ-194)ರಲ್ಲಿ ಆಫ್ಘಾನಿಸ್ತಾನದ ಕರೆನ್ಸಿ ಮೇಲೆ ಹಿಂದೂ ರಾಜರು 'ಎತ್ತಿನ' ಚಿತ್ರವನ್ನು ಟಂಕಿಸಿದ್ದಾರೆ. ಇದು ಗೋರ್‌ವಂಶಿಯಾ ರಾಜರ ಕಾಲದೆಂದಿದ್ದಾರೆ. ಗೋರ್ ರಾಜ್ಯದ ಬಗ್ಗೆ ವಿವರಿಸುವಾಗ ಡಾ. ಶ್ಯಾಮ್ ಮನೋಹರ್ ವ್ಯಾಸ್-'ಭಾರತೀಯ ಸಂಸ್ಕೃತಿ ಮತ್ತು ದಭಾನ್'(ಪುಟ-118)ರಲ್ಲಿ ಗಾಂಧಾರ(ಆಫ್ಘಾನಿಸ್ತಾನ)ದಲ್ಲಿ ಇಸ್ಲಾಂಗೆ ಮುಂಚೆ ಸನಾತನ ಮತ್ತು ಬುದ್ಧಿಸ್ಟ್ ಆಚರಣೆಯಲ್ಲಿತ್ತು.

ಡಾ. ಮಹಮ್ಮದ್ ಅಮರ್-'ಮುಸ್ಲಿಮರ ಮೇಲೆ ಭಾರತೀಯ ಸಂಸ್ಕೃತಿಯ ಪ್ರಭಾವ' ಅನುವಾದ: ಜಾನಕಿ ಪ್ರಸಾದ್ ಶರ್ಮ(ಪುಟ-213) "Gorvamshiya are basically Vedic in nature. they are adoption of Buddhism." ಎಂದಿರುವುದು ಗೋರ್‌ಬಂಜಾರ ಇವರು ಬೌದ್ಧಧರ್ಮದಲ್ಲಿ ಸಂಕರಗೊಂಡಿರುವ ಬಗ್ಗೆ ವಿವರಿಸಿರುವುದು ಸತ್ಯವಿದೆ. ಅನೇಕ ವಿದ್ವಾಂಸರು ಬೌದ್ಧ ಧರ್ಮ ಮೊಟ್ಟಮೊದಲು ಭಾರತದಿಂದ ಹೊರ ಹೋಗಿದ್ದು, ಆಫ್ಘಾನಿಸ್ತಾನ್‌ಗೆ ಎಂದು ವಿವರಿಸುತ್ತಾರೆ. "ಬೌದ್ಧ ಧರ್ಮವು ತನ್ನ ಉಚ್ಛ್ರಾಯದ ಕಾಲದಲ್ಲಿ ಪೂರ್ವಕ್ಕಿಂತಲೂ ಪಶ್ಚಿಮದ ಕಡೆಗೆ ಹೆಚ್ಚಾಗಿ ಪಸರಿಸಿತು. ಬಮಿಯಾನ್ (ಆಫ್ಘಾನಿಸ್ತಾನ್) ಬೃಹತ್ ಶಿಲೆಯಲ್ಲಿ ಕೆತ್ತಿರುವ 60 ಅಡಿ ಎತ್ತರದ ಬುದ್ಧನ ದೈತ್ಯಾಕಾರದ ವಿಗ್ರಹ ಇದಕ್ಕೊಂದು ಒಳ್ಳೆಯ ಸಾಕ್ಷಿ." ಡಿ.ಡಿ ಕೋಸಂಬಿ ಅಭಿಪ್ರಾಯಪಡುತ್ತಾರೆ.

"ಕ್ರಿ.ಪೂ.326ರಲ್ಲಿ ಭಾರತದ ಮೇಲೆ ದಂಡೆತ್ತಿ ಬಂದ ಅಲೆಕ್ಸಾಂಡರ್ ಲಂಬಾಣಿಗರ ಒಂಟೆಗಳನ್ನು ಯುದ್ಧಕ್ಕೆ ಉಪಯೋಗಿಸಿದ್ದನೆಂಬ ಇತಿಹಾಸವಿದೆ. ಮತ್ತೆ ಪ್ರಸಿದ್ಧ ಇತಿಹಾಸಕಾರ ಡಿ.ಡಿ ಕೋಸಂಬಿ ರವರ ಉಲ್ಲೇಖದಂತೆ ಪ್ರಾಚೀನ ಕಾಲದಲ್ಲಿ ಕಾರ್‌ವಾನ್‌ಗಳು ವ್ಯಾಪಾರದಲ್ಲಿ ನಿರತವಾಗಿದ್ದವೆಂದು ಬೌದ್ಧಧರ್ಮ ಅವನತಿ ಹೊಂದಿದ್ದಾಗ ಅಂದಿನ ಬಣಗಳು ಛಿದ್ರವಾಗಿ ಸಣ್ಣ ಸಣ್ಣ ಗುಂಪುಗಳಾಗಿದ್ದವರಲ್ಲಿ ಲಂಬಾಣಿಗರು ಸಹ ಒಬ್ಬರಾಗಿದ್ದಾರೆ." ಎಂದಿದ್ದಾರೆ.

ಬೌದ್ಧ ಧರ್ಮಕ್ಕೆ ಗುಪ್ತರ ಕಾಲದಲ್ಲಿ ಬಹಳ ದೊಡ್ಡ ಪೆಟ್ಟುಬಿದ್ದಿದೆ. ಇದಕ್ಕೆ ಕಾರಣ ಹಿಂದೂ ಧರ್ಮದ ಪುನರುತ್ಥಾನ. ಬೌದ್ಧ ಧರ್ಮ ಉತ್ತುಂಗ ಕಾಲದಲ್ಲಿರುವಾಗ ಅನೂಹ್ಯ ಬುಡಕಟ್ಟು ಸಮುದಾಯ ಆ ಧರ್ಮವನ್ನು ಸ್ವೀಕರಿಸಿದ್ದಾರೆ. ಅದೇ ರೀತಿ ಬಂಜಾರ ಬುಡಕಟ್ಟು ಸಮುದಾಯ ಕೂಡ ಆ ಧರ್ಮದಲ್ಲಿ ಸಂಕರಗೊಂಡಿದ್ದಾರೆ. ಆದರೆ ಅನೇಕ ರಾಜಕೀಯ ಕಾರಣಗಳಿಂದ ಬೌದ್ಧ ಧರ್ಮ ಭಾರತದಲ್ಲಿ ಅದರ ಅಸ್ತಿತ್ವವನ್ನು ಕಳೆದುಕೊಂಡ ಮೇಲೆ ಇಲ್ಲಿಯ ಬುಡಕಟ್ಟು ಸಮುದಾಯಗಳಲ್ಲೂ ಬೌದ್ಧ ಧರ್ಮ ಕಣ್ಮರೆಯಾಗಿದೆ. ಡಾ. ಬಾಬಾ ಸಾಹೇಬ್ ಅಂಬೇಡ್ಕರ್‌ರವರು ಬೌದ್ಧ ಧರ್ಮವನ್ನು ಸ್ವೀಕರಿಸಿದ ನಂತರ ಅವರ ತಾತ್ವಿಕ ಅನುಯಾಯಿಗಳು ಬೌದ್ಧ ಧರ್ಮವನ್ನು ಸ್ವೀಕರಿಸಿ, ಅನುಸರಿಸುತ್ತಿದ್ದಾರೆ. ಸ್ವಾತಂತ್ರ್ಯ ನಂತರ ಸಂವಿಧಾನದ ಸವಲತ್ತು ಪಡೆಯುವಲ್ಲಿ ಕಾನೂನು ತೊಡಕು ಎದುರಾಗಬಹುದೆಂಬ ಆತಂಕವಿದ್ದಾಗ್ಯೂ ಬೆರಳೆಣಿಕೆಯ ಬಂಜಾರರು ಬೌದ್ಧಧರ್ಮದಲ್ಲಿ ಗುರುತಿಸಿಕೊಂಡಿದ್ದಾರೆಂದು ಪ್ರೊ.

ಪ್ರದೀಪ್ ರಾಮಾವತ್ ರವರು ಅಭಿಪ್ರಾಯಪಡುತ್ತಾರೆ.

## ಜೈನ ಧರ್ಮ

ಜೈನಧರ್ಮವು 24 ಜನ ತೀರ್ಥಂಕರರನ್ನು ಹೊಂದಿದೆ. ಕೊನೆಯ ಇಬ್ಬರು ಪಾರ್ಶ್ವನಾಥ ಮತ್ತು ಮಹಾವೀರರು ಚಾರಿತ್ರಿಕ ವ್ಯಕ್ತಿಗಳು. ವರ್ಧಮಾನ ಮಹಾವೀರ. (ಕ್ರಿ.ಪೂ.540–468) ಇವರು ಜೈನ ಧರ್ಮದ ಸ್ಥಾಪಕರು. ಜೈನ ಧರ್ಮ ಅಹಿಂಸಾ, ಸತ್ಯ, ಅಸ್ತೇಯ ಮತ್ತು ಬ್ರಹ್ಮಚರ್ಯ ಎಂಬ ತತ್ವಗಳನ್ನು ಹಾಗೂ 'ತ್ರಿರತ್ನ'ಗಳನ್ನು ಪಾಲಿಸುವ ಅತೀ ಕಠಿಣ ವ್ರತಗಳನ್ನು ಹೊಂದಿದೆ. ಜೈನ ಧರ್ಮ ದೇವರ ಅಸ್ತಿತ್ವನ್ನು ನಿರಾಕರಿಸದೆ, ವೇದಗಳು ಸಂಸ್ಕಾರ, ಯಜ್ಞಯಾಗಗಳನ್ನು ನಿರಾಕರಿಸುತ್ತದೆ.

ಅಂಧಾಚರಣೆ, ನರಬಲಿ, ಮೌಢ್ಯತುಂಬಿದ ಸಮಾಜದ ಪರಿವರ್ತನೆಗಾಗಿ ಜೈನ ಧರ್ಮವು ಅತೀ ಕಠಿಣ ವ್ರತಾಚರಣೆಯನ್ನು ಪ್ರಾರಂಭಿಸಿತು. ಜೈನ ಧರ್ಮದ ಈ ಕಠಿಣ ವ್ರತಾಚರಣೆಗಳನ್ನು ಅಳವಡಿಸಿಕೊಂಡು ಪಾಲಿಸುವುದು ಸಾಕಷ್ಟು ಬುಡಕಟ್ಟು ಸಮುದಾಯಗಳಿಗೆ ಸಾಧ್ಯವಾಗಿಲ್ಲ. "ಮಾರವಾಡಿ, ಗುಜ್ಜರ, ಹಾಗೂ ಲಂಬಾಣಿಗರು ಮೂಲತಃ ರಾಜಸ್ಥಾನ ಪರಂಪರೆಯವರು" ಎಂದು ಡಾ. ಹರಿಲಾಲ್ ಪವಾರ್ ಉಲ್ಲೇಖಿಸುತ್ತಾರೆ. ಈ ಸಮುದಾಯದ ವ್ಯಾಪಾರಿ ಗುಂಪುಗಳು ಜೈನ ಧರ್ಮ ಸೇರಿ ಜೈನ ಮಾರವಾಡಿಗಳೆಂದೇ ಪ್ರಸಿದ್ಧರಾಗಿದ್ದಾರೆ. ಜನಪದರು 'ಬಂಜಾರ ಜನರನ್ನು ಹಳ್ಳಿಗಾಡಿನ ಮಾರವಾಡಿಗಳು' ಎಂದು ಕರೆಯುತ್ತಾರೆ. ಈ ಮಾರವಾಡಿ, ಗುರ್ಜರ ಸಮುದಾಯ ಬಂಜಾರ ಸಮುದಾಯದ ಸೋದರ ಸಮುದಾಯವಾಗಿದೆ. ರಾಜಸ್ಥಾನದಲ್ಲಿ ಜೈನ ಧರ್ಮ ಉತ್ತುಂಗಸ್ಥಾನದಲ್ಲಿದ್ದಾಗ ಅನೇಕ ಬಂಜಾರರು ಜೈನ ಧರ್ಮದಲ್ಲಿ ಸಂಕರಗೊಂಡಿದ್ದಾರೆ. ಆದ್ದರಿಂದಲೇ "ಈ ಮೂರು ಸಮಾಜಗಳ ಜನರ ವೇಷಭೂಷಣ, ಭಾಷೆ, ಆಚಾರ–ವಿಚಾರಗಳಲ್ಲಿ ಸಾಕಷ್ಟು ಸಾಮ್ಯತೆಯಿರುವುದನ್ನು ಕಾಣಬಹುದು" ಎಂಬ ಪವಾರರ ಮಾತು ಒಪ್ಪುವಂತಹದ್ದು.

ಮತ್ತೆ ಮಧ್ಯಕಾಲೀನ ಭಾರತದ ಇತಿಹಾಸದ ಅಧ್ಯಯನದಿಂದ ರಾಜಸ್ಥಾನದಲ್ಲಿ ಕ್ರಿ.ಶ 783ರಲ್ಲಿ ಗುರ್ಜರಪ್ರತಿಹಾರ ರಾಜ ವತ್ಸರಾಜನಿಂದ ನಿರ್ಮಿತಗೊಂಡ ಓಸಿಯನ್ ಜೈನ ದೇವಾಲಯ, ಜೋಧಪುರ ಮತ್ತು ಪ್ರಸಿದ್ಧ ದಿಲ್ವಾರ ದೇವಾಲಯ, ಮೌಂಟ್ ಅಬು ಹಾಗೂ ಮೀರ್ಪುರ್ ಜೈನ ದೇವಾಲಯ, ಸಂಘೀಜಿ ದೇವಸ್ಥಾನ, ರಣಕ್‌ಪುರ್ ಜೈನ್ ಟೆಂಪಲ್, ನಾಕೋಡ ಜೈನ ದೇವಾಲಯ, ಲೋದುರ್ವಾ ಜೈನ ದೇವಾಲಯಗಳು ಪ್ರಸಿದ್ಧವಾಗಿರುವುದನ್ನು ಗುರುತಿಸಬಹುದು.

ಆಧುನಿಕಕಾಲದ ಬಂಜಾರರು ಜೈನಧರ್ಮವನ್ನು ಸ್ವೀಕರಿಸುತ್ತಿಲ್ಲ. ಕಾರಣ ಜೈನ ಧರ್ಮದ ಕಠಿಣ ನೀತಿ–ನಿಯಮ, ಆಚರಣೆ, ಊಟದ ಪದ್ಧತಿ ಇವೆಲ್ಲವೂ ಸರಳವಲ್ಲ. ವಸಾಹತುಶಾಹಿಗಳ ಕ್ರಿಮಿನಲ್ ಟ್ರೈಬ್ಸ್ ಕಾಯ್ದೆಯ ಜಾರಿಯಿಂದ ಬಂಜಾರ ಸಮುದಾಯ ಒಡಲು ತುಂಬಿಕೊಳ್ಳುವ ಕಾಯಕದಲ್ಲಿ ಅವರಿಗೆ ಕಠಿಣ ನಿಯಮವುಳ್ಳ ಜೈನ ಧರ್ಮದಲ್ಲಿ ಸಂಕರಗೊಳ್ಳಲು ಸಾಧ್ಯವಾಗಿರಲಿಕ್ಕಿಲ್ಲ.

## ಕ್ರೈಸ್ತ ಧರ್ಮ

ಸುಮಾರು 2000 ವರ್ಷಗಳ ಹಿಂದೆ ಪ್ಯಾಲೆಸ್ತೀನ್ ದೇಶದ ಬೆತ್ಲೆಹೇಂ ಎಂಬಲ್ಲಿ ಜನ್ಮವೆತ್ತಿದ ಯೇಸುಕ್ರಿಸ್ತನಿಂದ 'ಕ್ರೈಸ್ತ ಧರ್ಮ' ಸ್ಥಾಪನೆಯಾಯಿತು. ಕ್ರಿಸ್ತ ಹುಟ್ಟಿದ ಕಾಲಕ್ಕೆ ಯಹೂದ್ಯ ನಾಡು ರೋಮನ್ ಸಾಮ್ರಾಜ್ಯಕ್ಕೆ ಒಳಪಟ್ಟಿದ ಕಾರಣ ಸಹಜವಾಗಿ ಸ್ವತಂತ್ರರಾಗಲು ಒಬ್ಬ ನಾಯಕನನ್ನು ಹುಡುಕುತ್ತಿದ್ದರು. ಕ್ರಿಸ್ತನನ್ನು ನಾಯಕನನ್ನಾಗಿ ಸ್ವೀಕಾರ ಮಾಡಿದರು. ಆದರೆ ಕ್ರಿಸ್ತನು ರಾಜಕೀಯ ಲಾಭಕ್ಕಾಗಿ ಹೋರಾಟ ಮಾಡದೆ ತಮ್ಮದೇ ಜನ ಹೊಂದಿದ್ದ ಮೌಢ್ಯದ ವಿರುದ್ಧ ಹೋರಾಡಲು ಅಣಿಯಾದರು.

ಏಸುಕ್ರಿಸ್ತ ತಮ್ಮ ಬೋಧನೆಯಲ್ಲಿ, ನಿನ್ನನ್ನು ವಿರೋಧಿಸುವವನಿಗೂ ನೀನು ಸ್ನೇಹಭಾವ ತೋರು, ಕ್ಷಮೆ ಇರುವಲ್ಲಿ ಪ್ರೀತಿ ವಿಶ್ವಾಸ ಮೊಳೆಯುತ್ತದೆ. ಎಲ್ಲಾ ಮಾನವರೂ ಒಂದೇ ಎಂಬ ಉದಾತ್ತ ಭಾವ ಉಂಟಾದಾಗ ಜಗತ್ತು ಸುಂದರವಾಗಿರುತ್ತದೆ. ಆಗ ಪ್ರತಿ ಮಾನವನೂ ದೇವಸ್ವರೂಪಿಯಾಗುತ್ತಾನೆ ಎಂದು ಹೇಳುತ್ತಾರೆ.

ಕ್ರೈಸ್ತ ಧರ್ಮ ಪ್ರಪಂಚದ ಧರ್ಮಗಳಲ್ಲಿಯೇ ಹಿರಿದಾದ ಧರ್ಮವಾಗಿ ಬೆಳೆದಿದೆ. ಈ ಧರ್ಮ ತಾನು ಹುಟ್ಟಿದ ಭೌಗೋಳಿಕ ಎಲ್ಲೆಯನ್ನು ಮೀರಿ ವಿಶ್ವದಲ್ಲಿಯೇ ಹರಡಿಕೊಂಡಿದೆ. ಇದು ಹುಟ್ಟಿದ ಎರಡು ಶತಮಾನಗಳಲ್ಲೇ ಸಂತರು ದಕ್ಷಿಣ ಭಾರತದ ಕೊಚ್ಚಿನ್ ಪ್ರದೇಶಕ್ಕೆ ತಂದರು. ನಂತರ ಬಂದ ಪೋರ್ಚುಗೀಸರು, ಡಚ್ಚರು, ಫ್ರೆಂಚರು ಮತ್ತು ಇಂಗ್ಲೀಷರು ವ್ಯಾಪಾರಕ್ಕಾಗಿ ಬಂದು ತಮ್ಮ ಧರ್ಮದ ಪ್ರಚಾರವನ್ನು ಮಾಡಿದರು. ಇಂಗ್ಲೀಷರು ಇಲ್ಲಿಯ ಅಧಿಕಾರವನ್ನು ಹಿಡಿದ ಮೇಲೆ ತಮ್ಮ ಧರ್ಮ ಪ್ರಚಾರ ಕೆಲಸವನ್ನು ಹೆಚ್ಚು ಮಾಡಿದರು ಮತ್ತು ಬಾಸೆಲ್ ಮಿಷನ್, ವೆಸ್ಲಿಯನ್ ಮಿಷನ್ ಮುಂತಾದ ಪ್ರಚಾರ ಸಂಘಗಳನ್ನು ಸ್ಥಾಪನೆ ಮಾಡಿದರು. ಅಲ್ಲದೆ ಶಾಲಾ-ಕಾಲೇಜು ಹಾಗೂ ಆಸ್ಪತ್ರೆಗಳನ್ನು ತೆರೆದು ಭಾರತದಲ್ಲಿ ಭದ್ರ ಬುನಾದಿಯನ್ನು ಹಾಕಿಕೊಂಡರು.

ವಿದೇಶಗಳಿಗೆ ವ್ಯಾಪಾರದ ಕಾರಣಕ್ಕೆ ವಲಸೆ ಹೋದ ಬಂಜಾರರು ಕ್ರೈಸ್ತಧರ್ಮವನ್ನು ಸ್ವೀಕರಿಸಿದ್ದಾರೆ. ತಮಿಳುನಾಡಿನ ಕೃಷ್ಣಗಿರಿ ಜಿಲ್ಲೆಗಳಲ್ಲಿನ ತಾಂಡಗಳಲ್ಲಿ ಸ್ವಾತಂತ್ರ್ಯಕಾಲಕ್ಕೆ ಕ್ರೈಸ್ತಧರ್ಮ ಪ್ರವೇಶಿಸಿ ತಾಂಡಗಳಲ್ಲಿ ಚರ್ಚ್‌ಗಳು ನಿರ್ಮಾಣಗೊಂಡಿವೆ. ಮದ್ರಾಸ್ ಪ್ರಾಂತ್ಯದಲ್ಲಿ ಕ್ರೈಸ್ತಧರ್ಮದ ಶರವೇಗದ ಬೆಳವಣಿಗೆ ಇದಕ್ಕೆ ಕಾರಣ. ಆದರೆ ಕರ್ನಾಟಕದಲ್ಲಿನ ಬಂಜಾರ ಸಮುದಾಯ ಸ್ವಾತಂತ್ರ್ಯಪೂರ್ವ ಕ್ರೈಸ್ತಧರ್ಮ ಸ್ವೀಕರಿಸುವ ಬಗ್ಗೆ ಮಾಹಿತಿ ಅಲಭ್ಯ. ಇದಕ್ಕೆ ಕಾರಣವೂ ಇದೆ. ಹೈದ್ರಾಬಾದ್ ಪ್ರಾಂತ್ಯದ ಬಂಜಾರರು ಇಸ್ಲಾಂ ಧರ್ಮವನ್ನು ಸ್ವೀಕರಿಸಿ ಸರಿಯಾದ ನೆಲೆಕಾಣದೆ ಅತಂತ್ರ ಸ್ಥಿತಿಯಲ್ಲಿರುವ 'ಢಾಢಿ ಬಂಜಾರ'ರನ್ನು ಕಂಡಿದ್ದರು. ಮತ್ತು ಬಂಜಾರ ಬುಡಕಟ್ಟು ಸಮುದಾಯದ ಆಂತರಿಕ ಸಾಮಾಜಿಕ ವ್ಯವಸ್ಥೆ ಕಠಿಣವಿದ್ದು ಮತ್ತೆ ವಾಪಸ್ಸು ಸಮುದಾಯಕ್ಕೆ ಸೇರಿಸಿಕೊಳ್ಳದೆಯಿರುವ ಕಾರಣಕ್ಕೆ ಹಾಗೂ ಅಪರಿಚಿತ

ಇಂಗ್ಲೀಷ್‌ನವರ ಭಾಷೆ ಮತ್ತು ಸಂಸ್ಕೃತಿಯಿಂದ ದೂರ ಇರುವಂತೆ ಮಾಡಿದೆ. ಮತ್ತೆ ಬಂಜಾರರ ವ್ಯಾಪಾರ ವೃತ್ತಿಯ ಮೇಲೆ ಕಣ್ಣಿಟ್ಟ ಬ್ರಿಟಿಷರಿಗೆ, ಇವರನ್ನು ನಿಯಂತ್ರಿಸಲು 1773ರಲ್ಲಿ ರೆಗ್ಯುಲೇಟಿಂಗ್ ಕಾಯ್ದೆ ಮತ್ತು 1871 ರಲ್ಲಿ ಕ್ರಿಮಿನಲ್ ಟ್ರೈಬ್ಸ್ ಕಾಯ್ದೆಗಳನ್ನು ತಂದರು. ಈ ಎಲ್ಲಾ ಕಾರಣಕ್ಕೆ ಬಿಳಿಯರನ್ನು ಮತ್ತು ಅವರ ಧರ್ಮವನ್ನು ಬಂಜಾರ ಸಮುದಾಯ ನಂಬಿರುವುದಿಲ್ಲ ಮತ್ತು ಅದನ್ನು ಸ್ವೀಕರಿಸಿರುವುದಿಲ್ಲ.

ಆದರೆ 20-21ನೇ ಶತಮಾನದ ನಂತರದ ಪರಿಸ್ಥಿತಿ ಬದಲಾಗಿದೆ. ಬ್ರಿಟಿಷರ ನೀತಿಯಿಂದ ಬಡವರಾಗಿದ್ದ ಬಂಜಾರ ಸಮುದಾಯಕ್ಕೆ ಸ್ಥಳೀಯರು ಇವರನ್ನು ಅನುಮಾನದಿಂದ ನೋಡುತ್ತಿದ್ದರು ಮತ್ತು ಅವಮಾನಿಸುತ್ತಿದ್ದರು. ಆ ಕಾರಣ ಬಂಜಾರ ಸಮುದಾಯದ ಅನೇಕ ಜನ ಕ್ರೈಸ್ತ ಧರ್ಮದ ಪ್ರಚಾರಕರ ಮಾತಿಗೆ ಮರುಳಾಗಿ ಒಬ್ಬೊಬ್ಬರೇ ಕ್ರೈಸ್ತ ಧರ್ಮದ ಕಡೆ ಮುಖಮಾಡಿದರು. ಇಲ್ಲಿಗೆ ಹೋದವರು ಮತ್ತೂ ಕೆಲವರನ್ನು ಕರೆದುಕೊಂಡು ಹೋದರು. ಹೀಗೆ ಹೋದವರ ಪೈಕಿ ಕೆಲವರಿಗೆ ಮತಾಂತರ ಮಾಡುವ ಕೆಲಸ ಸಿಕ್ಕಿತು. ಮುಂದೆ ಅವರು ಚರ್ಚ್‌ನ ಪಾದ್ರಿ ಕೂಡ ಆಗಿದ್ದಾರೆ. ಹಾವೇರಿ, ಮುಂಡಗೋಡ ಮೂಲದ ಬಂಜಾರ ಸಮುದಾಯದ ಆರು ಜನ ಶಿರಸಿಯ ಆದರ್ಶನಾಯ್ಕ ರವರ ಮನೆಗೆ ಹೋಗಿ ಏಸು ಕ್ರಿಸ್ತನ ಧ್ಯಾನ ಮಾಡಿದರೆ ನಿಮಗೆ ಎಲ್ಲಾ ಕಷ್ಟಗಳು ಪರಿಹಾರ ಆಗುತ್ತವೆಂದು ಹೇಳಿ ಮತಾಂತರ ಮಾಡಿದ ಬಗ್ಗೆ ಶಿರಸಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. [ಪ್ರಜಾವಾಣಿ ಪತ್ರಿಕೆ-ದಿನಾಂಕ:31-01-2024 ಪುಟ ಸಂ: 04]

ಕರ್ನಾಟಕದಲ್ಲಿ ಬಂಜಾರ ಸಮುದಾಯ ವಾಸಮಾಡಿಕೊಂಡಿರುವ ತಾಂಡಗಳಿಗೆ ಕ್ರೈಸ್ತ ಧರ್ಮ ಎಂಟ್ರಿ ಕೊಟ್ಟಿದೆ. ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲೂ ಬಂಜಾರರು ಇದ್ದಾರೆ. ಪ್ರಮುಖವಾಗಿ ಗುಲ್ಬರ್ಗಾ, ರಾಯಚೂರು, ಶಿವಮೊಗ್ಗ, ಕೊಪ್ಪಳ, ಬಳ್ಳಾರಿ ಧಾವಣಗೆರೆ, ವಿಜಯಪುರ, ಬಾಗಲಕೂಟೆ, ಬೀದರ್ ಚಿತ್ರದುರ್ಗಾ, ಹಾವೇರಿ, ಗದಗ, ತುಮಕೂರು ಇಲ್ಲಿ ಹೆಚ್ಚಿದ್ದಾರೆ. ಈ ಜಿಲ್ಲೆಗಳ ಕೆಲವು ತಾಂಡಗಳಲ್ಲಿ ಒಂದೆರಡು ಮನೆಗಳಿಂದ ಕೆಲವು ತಾಂಡಗಳಲ್ಲಿ 40-50 ಮನೆಗಳವರೆಗೆ ಕ್ರೈಸ್ತ ಧರ್ಮಿಯ ಬಂಜಾರರು ವಾಸ ಮಾಡಿಕೊಂಡಿದ್ದಾರೆ.

ಕ್ರೈಸ್ತ ಧರ್ಮೀಯ ಬಂಜಾರರು ತಾಂಡಗಳಲ್ಲಿಯೇ ವಾಸವಿದ್ದರೂ, ಅವರು ಆರಾಧನೆ ಮಾಡುವುದು ಏಸು ಕ್ರಿಸ್ತನನ್ನು. ಅವರು ಪ್ರಾಚೀನ ಕಾಲದಿಂದಲೂ ಆಚರಿಸಿಕೊಂಡು ಬರುತ್ತಿದ್ದ ಹಬ್ಬಗಳನ್ನು ಬಿಟ್ಟಿದ್ದಾರೆ. ಕ್ರೈಸ್ತ ಧರ್ಮದ ಹಬ್ಬಗಳನ್ನು ಈಗ ಆಚರಿಸುತ್ತಿದ್ದಾರೆ. ಹಾಗೂ ಅವರ ಮದುವೆಯ ಕೊಡು-ಕೊಳುವಿಕೆ, ಮದುವೆ ಸಮಾರಂಭ ಕೂಡ ಕ್ರೈಸ್ತ ಧರ್ಮದ ಅನ್ವಯ ನಡೆಯುತ್ತಿದೆ.

ಬಂಜಾರ ಸಮುದಾಯದ ಬಡತನವನ್ನೇ ಬಂಡವಾಳ ಮಾಡಿಕೊಂಡ ಪರ ಧರ್ಮಗಳು ಪ್ರಕೃತಿ ಆರಾಧಕರಾದ ಬಂಜಾರರನ್ನು ತಮ್ಮ ಧರ್ಮದ ತೆಕ್ಕೆಗೆ ಹಾಕಿಕೊಳ್ಳುತ್ತಿವೆ. ಮತ್ತೆ ಬಡತನದ ಬೇಗೆಯಿಂದ ಹೊರಬರಲು ಬಂಜಾರ ಸಮುದಾಯದ ಜನ ಕೂಡ ಕ್ರೈಸ್ತ ಧರ್ಮದಲ್ಲಿ ಸಂಕರಗೊಳ್ಳುತ್ತಿದ್ದಾರೆ.

ಇಸ್ಲಾಂ ಧರ್ಮ

ಇಸ್ಲಾಂ ಧರ್ಮದ ಸ್ಥಾಪಕ "ಪ್ರವಾದಿ ಮೊಹಮದ್ ಜನನಕ್ಕಿಂತ ಬಹಳ ಹಿಂದೆ ಅರೇಬಿಯಾ ಹಲವಾರು ಬುಡಕಟ್ಟು ಜನಾಂಗಗಳಿಂದ ವಾಸಿಸಲ್ಪಟ್ಟಿತ್ತು." ಎಂದು ಡಾ.ಬಿ.ಆರ್ ಅಂಬೇಡ್ಕರ್ ಉಲ್ಲೇಖಿಸುತ್ತಾರೆ. ಇಲ್ಲಿ ವಾಸವಿದ್ದ ಬುಡಕಟ್ಟು ಜನರು ಬಹುದೇವತಾರಾಧನೆಯ ದೈವಾಧಿಪತ್ಯದ ಭಾವನೆಯಿಂದ ಮುಳುಗಿದ್ದರು. ಅವರ ಧಾರ್ಮಿಕ ಮೌಢ್ಯಕ್ಕೆ ಉತ್ತುಂಗಕಾಲಕ್ಕೆ ಇಸ್ಲಾಂ ಧರ್ಮ ಉದಯವಾಗುತ್ತದೆ. ಅರಬರ ಪ್ರಸಿದ್ಧ ಹಾಶ್ಮೈಟ್ ಕುಟುಂಬಕ್ಕೆ ಸೇರಿದ ಪ್ರವಾದಿ ಮೊಹಮ್ಮದರು ಹುಟ್ಟುವ ಮುಂಚೆಯೇ 'ದೇವನು ಒಬ್ಬ' ಎನ್ನುವ ತಾತ್ವಿಕತೆ ಮೊಳಗಲಾರಂಭಿಸಿತ್ತು. ಇದರ ಜೊತೆ ಕೆಲವು ಚಿಂತನೆಗಳನ್ನು ಮೆಕ್ಕ ಮತ್ತು ಮದಿನಾದಲ್ಲಿ ಬೋಧಿಸಿದರು. ತಮ್ಮ ಧರ್ಮದ ಅನುಯಾಯಿಗಳಿಗೆ ಎಲ್ಲಾ ರೀತಿಯ ಅನುಕೂಲವನ್ನು ಮಾಡಿಕೊಟ್ಟು ತಮ್ಮ ಪಂಥವನ್ನು ಬಲಪಡಿಸಿಕೊಂಡರು. ಅನುಯಾಯಿಗಳ ಗುಂಪನ್ನು ಕಟ್ಟಿದರು. ಅವರಿಗೆ 'ಖಲೀಫ'ರೆಂದು ಕರೆಯಲಾಯಿತು. ಆ ಕಾಲದ ಓಮಿಯ್ಯಾ ಮನೆತನದಿಂದ ಬಂದ ಡಮಾಸ್ಕಸ್ ಅರಮನೆಯನ್ನು ಆಳುವ ರಾಜರುಗಳನ್ನು ಇಸ್ಲಾಂ ಧರ್ಮಕ್ಕೆ ಸೇರಿಸಿಕೊಳ್ಳುವುದು ಖಲೀಫರಿಗೆ ಕಷ್ಟವಾಗಲಿಲ್ಲ. ಟ್ರೋಜನ್ ಸಾಮ್ರಾಜ್ಯ ಅಥವಾ ಚಾರ್ಲ್ಮನ್ ಸಾಮ್ರಾಜ್ಯಗಳು ಕೂಡ ಮೊಹಮದರ ಅನುಯಾಯಿಗಳಾದರು. ಹೀಗೆ ಇಸ್ಲಾಂ ಧರ್ಮವನ್ನು ಜಗತ್ತಿನ 2ನೇ ದೊಡ್ಡ ಧರ್ಮವಾಗಿ ಬೆಳೆಸಿದರು.

ಅರಬ್ಬರ ಸೇನಾನಿ ಮಹಮ್ಮದ್ ಬಿನ್ ಘಾಸಿಂ ಕ್ರಿ.ಶ 712ರಲ್ಲಿ ಸಿಂಧ್ ಮೇಲೆ ಆಕ್ರಮಣ ಮಾಡಿದ್ದು, ಭಾರತದ ಮೇಲಿನ ಮುಸ್ಲಿಮರ ಮೊದಲ ದಾಳಿಯಾಯಿತು. ನಂತರ ಮಹಮ್ಮದ್ ಘಜ್ನಿ ಕ್ರಿ.ಶ 1000 ರಿಂದ 1027ರ ನಡುವೆ 17ಬಾರಿ ದಂಡಯಾತ್ರೆ ಮಾಡಿದನು. ನಂತರ ಮಹಮ್ಮದ್ ಘೋರಿ, ದೆಹಲಿ ಸುಲ್ತಾನರು, ಬಹಮನಿ ಸಾಮ್ರಾಜ್ಯ ಮತ್ತು ಮೊಘಲರು ಹೀಗೆ ಇವರೆಲ್ಲರೂ ಕ್ರಿ.ಶ 8ನೇ ಶತಮಾನದಿಂದ 18ನೇ ಶತಮಾನದವರೆಗೆ ಹಾಗೂ ಸ್ವಾತಂತ್ರ್ಯ ಪೂರ್ವದವರೆಗೂ ಹೈದರಾಬಾದಿನ ನಿಜಾಮರು ಇವರೆಲ್ಲರೂ ಭಾರತವನ್ನು ಆಳಿದರು. ಈ ಸಮಯದಲ್ಲಿ ಭಾರತದಲ್ಲಿನ ಅನೇಕ ಬುಡಕಟ್ಟು ಜನರು ಸಂಕರಗೊಂಡಿದ್ದಾರೆ.

ಹಾಗೆಯೇ ಬಂಜಾರ ಬುಡಕಟ್ಟು ಸಮುದಾಯದವರು ಮೊಘಲರ ಕಾಲದಲ್ಲಿ ಇಸ್ಲಾಂ ಧರ್ಮವನ್ನು ಸ್ವೀಕಾರ ಮಾಡಿದ್ದಾರೆ. ಇವರು 'ಢಾಡಿಬಂಜಾರ'ಗಳಾಗಿ ಬದುಕುತ್ತಿದ್ದಾರೆ. ಇವರು ಪಂಜಾಬ, ರಾಜಸ್ಥಾನ, ಗುಜರಾತ್, ಮಧ್ಯಪ್ರದೇಶ, ಕರ್ನಾಟಕ, ಮಹಾರಾಷ್ಟ್ರ, ಆಂದ್ರಪ್ರದೇಶ ಮತ್ತು ಇತರ ರಾಜ್ಯಗಳಲ್ಲಿ ಕಂಡುಬರುತ್ತಾರೆ. ಇಸ್ಲಾಂ ಧರ್ಮವನ್ನು ಪ್ರಚಾರ ಮಾಡುವ ಸೂಫಿಗಳ ಹಾಗೆ, ಢಾಢಿಗಳು ಬಂಜಾರರ ತಾಂಡ ತಾಂಡಗಳಿಗೆ ಹೋಗಿ ರಾತ್ರಿ ಇಡೀ ಇದ್ದು, ಬಂಜಾರರ ಚರಿತ್ರೆ ಕುರಿತು ಹಾಡುವುದು, ಹೇಳುವುದು ಮಾಡಿ ತಾಂಡದ ಜನ ಕೊಡುವ ದವಸ-ಧಾನ್ಯ ಪಡೆದು ಜೀವನ ಸಾಗಿಸುತ್ತಾರೆ. ಢಾಢಿಗಳು ಇಸ್ಲಾಂ ಧರ್ಮವನ್ನು ಸ್ವೀಕಾರ ಮಾಡಿದ್ದರೂ, ಆ ಧರ್ಮದ ಬೋಧನೆ ಅವರಿಗೆ ಗೊತ್ತಿರದ ಕಾರಣ ಈ ಕೆಲಸ ಮಾಡುತ್ತಾರೆ.

'ಲಂಬಾಣಿಗರಲ್ಲಿ ಹವ್ಯಾಸಿ ಗಾಯಕರಿರುವಂತೆಯೆ ವೃತ್ತಿಗಾಯಕರು ಕೂಡ ಕಂಡುಬರುತ್ತಾರೆ. ಅವರನ್ನು 'ಢಾಢಿ' ಎಂದು ಕರೆಯುತ್ತಾರೆ.' ಇವರೇ ಇಸ್ಲಾಂಧರ್ಮದಲ್ಲಿ ಸಂಕರಗೊಂಡ ಬಂಜಾರ ಢಾಢಿಗಳು.

ಮಹಾರಾಷ್ಟ್ರದ ಲಾಥೂರ್ ನಾಂದೇಡ್ ಮತ್ತು ಪರ್ಭನಿ ಜಿಲ್ಲಾದ ಕ್ರಮವಾಗಿ ಸುಮಾರು 2000 ಮನೆಗಳಿರುವ ಡವಳಕೆವಾಡಿ ತಾಂಡದಲ್ಲಿ 50ಮನೆ, ಸುಮಾರು 250ಮನೆಯ ದಗಡವಾಡಿ ತಾಂಡದಲ್ಲಿ 4ಮನೆ, 200ಮನೆಯ ಜಾನವಳ್ ತಾಂಡದಲ್ಲಿ 10ಮನೆ, ಕಾಸಾರ್‌ಖೇಡ್ ತಾಂಡದಲ್ಲಿ 20ಮನೆ, ಶಿವಾಜಿನಗರ ತಾಂಡದಲ್ಲಿ 35ಮನೆ ಮತ್ತು ಓಕರ್ಣಿ ತಾಂಡದಲ್ಲಿ 20ಮನೆ ಢಾಢಿಗಳು ವಾಸವಿದ್ದು, ಇವರು ಕರ್ನಾಟಕದ ಎಲ್ಲಾ ಜಿಲ್ಲೆಗಳ ತಾಂಡಗಳಿಗೆ ಸಾರಂಗಿ, ಕಕರಾ ವಾದ್ಯ ಸಹಿತ ಭೇಟಿ ಕೊಟ್ಟು, ಬಂಜಾರರ ಕುರಿತ ಪದಗಳನ್ನು ಹಾಡಿ ದವಸಧಾನ್ಯ ಪಡೆದು ಹೋಗುತ್ತಾರೆ. ಕರ್ನಾಟಕದ ಕಲ್ಬುರ್ಗಿ, ಗದಗ, ವಿಜಯಪುರ, ಶಿವಮೊಗ್ಗ, ಚಿತ್ರದುರ್ಗ ಈ ಜಿಲ್ಲೆಗಳ ಕೆಲವೊಂದು ತಾಂಡಗಳಲ್ಲಿ ಢಾಢಿಗಳು ಕಂಡು ಬರುತ್ತಾರೆ. ಆದರೆ ಇಂದು ಅವರು ತಾಂಡಗಳಿಗೆ ಹೋಗುವುದನ್ನು ಬಿಟ್ಟು ಸಣ್ಣ-ಪುಟ್ಟ ವ್ಯಾಪಾರ ವಹಿವಾಟು ಮಾಡಿಕೊಂಡಿದ್ದಾರೆ. "ಢಾಢಿಯವರು ಹಿಂದೂಗಳು ಆಚರಿಸುವ ದಸರಾ, ದೀಪಾವಳಿ, ಹೋಳಿ, ಯುಗಾದಿ ಮುಂತಾದ ಹಬ್ಬ ಹರಿದಿನಗಳನ್ನು ಸಂಭ್ರಮದಿಂದ ಆಚರಿಸುತ್ತಾರೆ. ಅದೇ ರೀತಿಯಲ್ಲಿ ಮುಸ್ಲಿಮರ ಹಬ್ಬಗಳಾದ ರಂಜಾನ್, ಮೊಹರಂ, ಬಕ್ರೀದ್ ಮುಂತಾದ ಹಬ್ಬಗಳನ್ನು ಆಚರಿಸುತ್ತಾರೆ"[ಕೃತಿ: ಢಾಢಿ ಕಥನಗೀತೆಗಳು ಪುಟ-06] ಎರಡೂ ಸಂಸ್ಕೃತಿಯನ್ನು ಇವರು ಪಾಲಿಸುತ್ತಾರೆ. ಆದರೆ ಇಸ್ಲಾಂ ಧರ್ಮದಲ್ಲಿ ಗುರುತಿಸಿಕೊಂಡಿದ್ದಾರೆ. ಇವರನ್ನು ಬಂಜಾರ ಸಮುದಾಯದವರು ತಮ್ಮ ಸಮಾಜಕ್ಕೆ ಮತ್ತೆ ವಾಪಸ್ಸು ಸೇರಿಸಿಕೊಳ್ಳದ ಕಾರಣ ಹಾಗೂ ಇಸ್ಲಾಂ ಧರ್ಮ ಸರಿಯಾಗಿ ಇವರಿಗೆ ಗೊತ್ತಿರದ ಕಾರಣ ಇಂತಹ ಅತಂತ್ರ ಪರಿಸ್ಥಿಯಲ್ಲಿ ಢಾಢಿ ಸಮುದಾಯವಿದೆ.

ಭಾರತದ ವಿವಿಧ ರಾಜ್ಯಗಳಲ್ಲಿ ಬಂಜಾರ ಮಕ್ರಾನಿ, ಮುಕೇರಿ, ಮಿಕ್ರಾನಿ, ನಾಯ್ಕ್, ಮಕ್ಕಿ, ತಬ್ರೇಜ್, ಕ್ವಾಜಾ, ನಿಜಾಮಿ, ಮುಲ್ತಾನಿ, ಬಾಲೋಚ್ ಮತ್ತು ವಾರ್ಸಿ ಎಂಬ ಉಪನಾಮವುಳ್ಳ ಮುಸ್ಲಿಂ ಬಂಜಾರ, ತುರ್ಕಾ ಲಂಬಾಡಿಗಳಿದ್ದಾರೆ. ಉತ್ತರ ಪ್ರದೇಶ, ಮಧ್ಯಪ್ರದೇಶ ಮತ್ತು ಗುಜರಾತ್ ರಾಜ್ಯದ ಮುಸ್ಲಿಂ ಬಂಜಾರರು 'ಮುಸ್ಲಿಂ ಬಂಜಾರ ಫೆಡರೇಷನ್' 'ಆಲ್ ಇಂಡಿಯಾ ಮುಸ್ಲಿಂ ವಿಕಾಸ್ ಮಂಚ್' ಎಂಬ ಸಂಘಗಳ ಮುಖಾಂತರ ಕಾರ್ಯಗತರಾಗಿದ್ದಾರೆ. 1947ರಲ್ಲಿ ಇಲ್ಲಿಂದ ಪಾಕಿಸ್ತಾನಕ್ಕೆ ವಲಸೆ ಹೋದ ಮುಸ್ಲಿಂ ಬಂಜಾರರು ಕರಾಚಿ ಮತ್ತು ಸಿಂಧ್ ಪ್ರದೇಶದಲ್ಲಿ ವಾಸವಿದ್ದಾರೆ. ಪಾಕಿಸ್ತಾನದ ಜನಗಣತಿ ಪ್ರಕಾರ ಹಿಂದೂ ಬಂಜಾರ ಸುಮಾರು 7900 ಮತ್ತು ಮುಸ್ಲಿಂ ಬಂಜಾರ ಸುಮಾರು 101000 ಇದ್ದಾರೆಂದು ತಿಳಿದು ಬರುತ್ತದೆ.

ಹಾವೇರಿ ಜಿಲ್ಲೆ, ಹಿರೇಕೆರೂರು ತಾಲ್ಲೂಕಿನ ಬಾವಾಪುರ ತಾಂಡದಲ್ಲಿ 200 ಲಂಬಾಣಿ ಮನೆಗಳಿದ್ದು, ಇಲ್ಲಿ ಬೇರೆ ಜಾತಿ-ಸಮುದಾಯದ ಮಂದಿಯಿಲ್ಲ. ಆದರೆ ಇಲ್ಲಿ ದರ್ಗಾ ನಿರ್ಮಾಣ ಮಾಡಿ ಅಕ್ಕಿಆಲೂರಿನಿಂದ ಮೌಲ್ವಿಯನ್ನು ಕರೆಯಿಸಿ,

ಮೊಹರಂ ಆಚರಣೆಯನ್ನು ಮಾಡುತ್ತಾರೆ. ಅಲ್ಲಾನ ಹೆಸರು ಪೀರ್ ಆಗಿದ್ದು, ಪೀರ್ ನಮಗೆ ಒಳ್ಳೆದನ್ನು ಮಾಡಲಿ ಎಂದು ಹಿರಿಯರು ಈ ಹಿಂದಿನಿಂದಲೂ ಮಾಡಿಕೊಂಡು ಬರುತ್ತಿದ್ದ, ಆಚರಣೆಯನ್ನು ತಾಂಡದವರು ತುಂಬಾ ವಿಶಿಷ್ಟವಾಗಿ ಆಚರಿಸುತ್ತ ಮುಂದುವರೆಸಿಕೊಂಡು ಬಂದಿದ್ದಾರೆ.[ಪ್ರಜಾವಾಣಿ ಪತ್ರಿಕೆ ದಿ:11–08–2022 ಪುಟ ಸಂ:02] ಇದೇ ರೀತಿ ಕರ್ನಾಟಕದ ಹಲವು ತಾಂಡಗಳಲ್ಲಿ ಮೊಹರಂ ಆಚರಣೆಯನ್ನು ಮಾಡಲಾಗುತ್ತಿದೆ. ಬಂಜಾರ ಸಮುದಾಯ ಇಸ್ಲಾಂ ಧರ್ಮದಲ್ಲಿ ಸಂಕರಗೊಂಡ ಚಹರೆಗಳನ್ನು ಅದರ ಸ್ಥಿತ್ಯಂತರಗಳನ್ನು ಗುರ್ತಿಸಬಹುದು.

**ಸಿಖ್ ಧರ್ಮ**

ಸಿಖ್ ಧರ್ಮದ ಪ್ರವರ್ತಕ 16ನೇ ಶತಮಾನದಲ್ಲಿ ಗುರು ನಾನಕ್(ಕ್ರಿ.ಶ.1469–1538) ಮತ್ತು ಅವರ ನಂತರ ಬರುವ ಒಂಬತ್ತು ಧರ್ಮ ಗುರುಗಳ ಉಪದೇಶಗಳ ಆಧಾರದ ಮೇಲೆ ಅಖಂಡ ಭಾರತದವಿದ್ದಾಗ, ಉತ್ತರ ಭಾರತದಲ್ಲಿ ಸ್ಥಾಪನೆಗೊಂಡಿದೆ. ಸಂಸ್ಕೃತ ಭಾಷೆಯಲ್ಲಿ 'ಸಿಖ್' ಪದದ ಅರ್ಥ 'ಶಿಷ್ಯ' ಎಂದಾದರೆ, ಪಂಜಾಬಿ ಭಾಷೆಯಲ್ಲಿ 'ಸಿಖ್' ಪದದ ಅರ್ಥ 'ಕಲಿಯುವವ' ಎಂದಾಗುತ್ತದೆ. ಸಿಖ್ ಧರ್ಮಿಯರ ಗ್ರಂಥ "ಗುರು ಗ್ರಂಥ ಸಾಹಿಬ್" ಆಗಿದೆ. ಒಂದು ಅಂದಾಜಿನ ಪ್ರಕಾರ ಈ ಧರ್ಮ ಪ್ರಪಂಚದಲ್ಲಿಯೇ ಒಂಬತ್ತನೇ ಅತಿದೊಡ್ಡ ಧರ್ಮವಾಗಿದೆ.

ಗುರುನಾನಕ್‌ರು ಈಗಿನ ಪಾಕಿಸ್ತಾನದ ತಳಮಂಡಿಯಲ್ಲಿ ತಂದೆ ಕಲ್ಯಾಣ್‌ದಾಸ್ ತಾಯಿ ಮೆಹ್ತಾ ತೃಪ್ತ ಇವರ ಮಗನಾಗಿ ಹುಟ್ಟಿದರು. ಸಣ್ಣ ವಯಸ್ಸಿನಿಂದಲೇ ಧಾರ್ಮಿಕ ವಿಚಾರಗಳಲ್ಲಿ ಆಸಕ್ತಿ ಹೊಂದಿದ್ದ ಗುರುನಾನಕ್ ಪರ್ಶಿಯಾ, ತುರ್ಕಸ್ತಾನ್, ಇರಾಕ್ ಮತ್ತು ಮೆಕ್ಕಾ ಮದಿನಾಗಳನ್ನೂ ಸಂದರ್ಶಿಸಿದರು. ನಂತರ ಡಾಕಾ, ಟಿಬೇಟ್ ಉತ್ತರ ಕಾಶ್ಮೀರ, ಉತ್ತರ ಭಾರತ, ದಕ್ಷಿಣ ಭಾರತದ ಕನ್ಯಾಕುಮಾರಿ, ಶ್ರೀಲಂಕಾ ಇನ್ನೂ ಮುಂತಾದ ಸ್ಥಳಗಳಲ್ಲಿ ಕಾಲ್ನಡಿಗೆಯಲ್ಲಿ ತಮ್ಮ ಶಿಷ್ಯರ ಜೊತೆ ಗೂಡಿ ಸಂಚಾರ ಮಾಡುತ್ತಾ, ಈಗಾಗಲೆ ಸ್ಥಾಪನೆಯಾಗಿರುವ ಧರ್ಮಗಳಲ್ಲಿನ ಅಂಧಾಚರಣೆಯನ್ನು ತಿಳಿಸುತ್ತಾ ಇಡೀ ಜಗತ್ತಿಗೆ 'ದೇವರ ಸ್ವರೂಪಿ ಒಡೆಯ ಒಬ್ಬನೇ' ಎಂದು ಸಾರಿದರು. ಅವರು ಯಾರಿಗೂ ತಮ್ಮ ಧರ್ಮವನ್ನು ತ್ಯಜಿಸಿ ಎಂದು ಹೇಳಲಿಲ್ಲ. ಮಾನವಕುಲವೆಲ್ಲಾ ಒಂದೇ ಇಲ್ಲಿ ಯಾರೂ ಮೇಲಲ್ಲ. ಯಾರೂ ಕೀಳಲ್ಲ ಎಂದು ಜಾತಿಪದ್ಧತಿಯನ್ನು ಖಂಡಿಸಿದರು. ಈ ಉಪದೇಶಗಳೇ ಸಿಖ್ ಧರ್ಮ ಬೆಳೆಯಲು ಪ್ರಮುಖ ಕಾರಣವಾಯಿತು.

ಸಿಖ್ ಧರ್ಮ ಸ್ಥಾಪನೆಯಾದಾಗಿನಿಂದ ಅಂದರೆ ಗುರುನಾನಕ್ ಕಾಲದಿಂದಲೇ ಬಂಜಾರ ಸಮುದಾಯದ ಒಂದು ಪಂಗಡ 'ಸಿಖ್ ಧರ್ಮ'ದ ಜೊತೆ ಗುರುತಿಸಿಕೊಂಡಿತು. ಪ್ರಮುಖವಾಗಿ ಬಹಳ ದೊಡ್ಡ ವ್ಯಾಪಾರಿ ಕುಟುಂಬವಾಗಿದ್ದ ಲಕ್ಕಿರಾಯ ವಂಜಾರ ಇವರ ಅಜ್ಜ ಮತ್ತು ಇತರರು ಗುರುನಾನಕ್‌ರ ಉಪದೇಶಗಳಿಂದ ಪ್ರೇರಣೆಗೊಂಡು ಸಿಖ್ ಧರ್ಮಿಯರಾದರು. ಉತ್ತರ ಭಾರತದ ಬಂಜಾರರನ್ನು

ಅಲ್ಲಿಯವರು ‘ವಂಜಾರ’ ಎಂದು ಕರೆಯುತ್ತಾರೆ. ಇಲ್ಲಿ ಸಿಖ್ ಬಂಜಾರರ ಕೂಲಂಕುಷವಾದ ಚರಿತ್ರೆಯನ್ನು ಇಲ್ಲಿ ಚರ್ಚಿಸಲಾಗಿದೆ.

ಲಕ್ಕಿರಾಯಿ ವಂಜಾರನು 9ನೇ ಸಿಖ್‌ಗುರು ಗುರುತೇಜ್ ಬಹುದ್ದೂರನ ರುಂಡವಿಲ್ಲದ ದೇಹವನ್ನು ದೆಹಲಿಯ ಚಾಂದಿನಿ ಚೌಕ್‌ನಿಂದ ತೆಗೆದುಕೊಂಡು ಹೋಗಿ ತನ್ನ ಮನೆಯಲ್ಲಿ ಅಂತ್ಯ ಸಂಸ್ಕಾರ ಮಾಡಿದ ಭಾಯಿ ಲಕ್ಕಿರಾಯ್ ವಂಜಾರನನ್ನು ಅನೇಕ ಸಿಖ್ ಇತಿಹಾಸ ಸ್ಮರಿಸುತ್ತದೆ.

1508ರಲ್ಲಿ ಗುರುನಾನಕರು ಮತ್ತು ಭಾಯಿ ಮಂದಾಣ ಅವರು ಸ್ಥಳದಿಂದ ಸ್ಥಳಕ್ಕೆ ಚೈತ್ರಯಾತ್ರೆಯನ್ನು ಕೈಗೊಂಡಾಗ ಅವರು ಒಂದು ತಾಂಡ(ಹರಿಯಾಣ ರಾಜ್ಯದ)ದ ಸ್ಥಳವನ್ನು ತಲುಪುತ್ತಾರೆ. ಅಲ್ಲಿ ಅನೇಕ ಜನರು ಅವರ ಮುಖ್ಯಸ್ಥರ ಮನೆಯಲ್ಲಿ ಹುಟ್ಟಿದಂತಹ ಗಂಡು ಮಗುವಿನ ಜನನದ ಸಂಭ್ರಮದಲ್ಲಿ ತಲ್ಲೀನರಾಗಿರುತ್ತಾರೆ. ಗುರುಗಳು ಆ ಸ್ಥಳದಲ್ಲಿ ನಿಂತುಕೊಂಡು ದೇವರ ನಾಮಗಳನ್ನು, ಪದಗಳನ್ನು, ಶ್ಲೋಕಗಳನ್ನು ಹಾಡಲು ಪ್ರಾರಂಭಿಸುತ್ತಾರೆ. ಆದರೆ ಅಲ್ಲಿಯ ವಂಜಾರರು ತಮ್ಮ ಸಂಭ್ರಮಾಚರಣೆಯಲ್ಲಿ ತಲ್ಲೀನರಾಗಿರುತ್ತಿದ್ದರಿಂದ ಗುರುಗಳ ದೇವರ ಶ್ಲೋಕಗಳನ್ನು ಸಹ ಕೇಳಿಸಿಕೊಳ್ಳದವರಾಗಿರುತ್ತಾರೆ. ಅವರು ಗುರುಗಳಿಗೆ ಆಹಾರವನ್ನು ನೀಡುವುದಿಲ್ಲ. ಸ್ವಲ್ಪ ಸಮಯದ ನಂತರ ಆ ಜಾಗವನ್ನು ಬಿಟ್ಟು ತಮ್ಮ ಯಾತ್ರೆಯನ್ನು ಮುಂದುವರೆಸುತ್ತಾರೆ. ಆದರೆ ಸಂಭ್ರಮಾಚರಣೆಯ ಮಧ್ಯದಲ್ಲಿ ದುರ್ದೈವ ವಶಾತ್ ಆಗತಾನೆ ಹುಟ್ಟಿದ ಹಸುಗೂಸು ಮರಣಿಸುತ್ತದೆ. ಎಲ್ಲರೂ ದುಃಖಿತರಾಗುತ್ತಾರೆ. ಸಂಭ್ರಮಾಚರಣೆಯು ಶೋಕಾಚರಣೆಯಾಗುತ್ತದೆ. ತಕ್ಷಣವೇ ಅವರಲ್ಲಿದ್ದ ಒಬ್ಬ ವ್ಯಕ್ತಿಯು ಆಗ ಬಂದು ಶ್ಲೋಕಗಳನ್ನು ಹಾಡುತ್ತಿದ್ದ ಫಕೀರಗಳನ್ನು ನಾವು ಗಮನಿಸಲಿಲ್ಲ. ಬಹುಶಃ ಅದಕ್ಕಾಗಿ ಅವರು ನಮಗೆ ಶಪಿಸಿರಬಹುದು. ಅಥವಾ ಗುರುಗಳನ್ನು ಗೌರವಿಸದೇ ಹೋಗಿದ್ದಕ್ಕೆ, ದೇವರ ಶಾಪವೂ ಆಗಿರಬಹುದು ಎಂದು ಹೇಳಿದನು. ಇದಕ್ಕೆ ಬೇರೆಯವರು ಸಹಮತಿಸಿದರು. ಆಗ ಅವರು ಒಬ್ಬ ವ್ಯಕ್ತಿಗೆ ಕುದುರೆಯನ್ನು ಕೊಟ್ಟು, ಅವನ್ನು (ಗುರುನಾನಕ ಮತ್ತು ಭಾಯಿ ಮಂದಾಣ) ಹುಡುಕಲು ಕಳುಹಿಸಿದರು. ಅವರಿಬ್ಬರೂ ಬಹಳ ದೂರು ಹೋಗಿರುವುದಿಲ್ಲ. ಆಗಲೇ ಒಬ್ಬ ಕುದುರೆ ಸವಾರ ಅವರನ್ನು ಹುಡುಕಿ, ಅವರಲ್ಲಿ ಕ್ಷಮೆಯನ್ನು ಯಾಚಿಸುತ್ತಾನೆ. ಹಾಗೂ ತಮ್ಮ ತಾಂಡದ ಸ್ಥಳಕ್ಕೆ ಮರಳಿ ಬರುವಂತೆ ವಿನಂತಿಸುತ್ತಾನೆ. ಅವರು ಪದೇ ಪದೇ ವಿನಂತಿಸಿದಾಗ ಗುರುನಾನಕ ಮತ್ತು ಭಾಯಿ ಮಂದಾಣ ಅವರೊಂದಿಗೆ ಹೋಗುತ್ತಾರೆ.

ಯಾವಾಗ ಗುರುಗಳು ಆ ಜನರು ಇರುವ ಜಾಗವನ್ನು ತಲುಪಿದರೋ ಆಗ ವಂಜಾರದ ಮುಖ್ಯಸ್ಥನು, ಮೊದಲು ಅವರನ್ನು ನಿರ್ಲಕ್ಷಿಸಿದರ ಸಲುವಾಗಿ ಅವರಲ್ಲಿ ಕ್ಷಮೆ ಕೇಳಿ ಸತ್ತಂತಹ ಮಗುವನ್ನು ಮತ್ತೆ ಬದುಕಿಸಿಕೊಡಿ ಎಂದು ಪ್ರಾರ್ಥಿಸುತ್ತಾನೆ. ಆಗ ಗುರುಗಳು ಹುಟ್ಟು ಮತ್ತು ಸಾವು ದೇವರ ಕೈಯಲ್ಲಿದೆ ಎಂದು ಹೇಳುತ್ತಾರೆ. ಇದನ್ನು ಬದಲಿಸುವ ಶಕ್ತಿ ಯಾರಲ್ಲೂ ಇಲ್ಲ, ಒಂದು ವೇಳೆ ಆ ದೇವರು ಕೆಲವೇ ಗಂಟೆಗಳ ಜೀವನವನ್ನು ಕೊಟ್ಟಿದ್ದರೆ, ಏಕೆ ಅವನ ಇಚ್ಛೆಯನ್ನು ಬದಲಿಸಲು, ಏಕೆ

ದೇವರನ್ನು ಪ್ರಾರ್ಥಿಸುವುದು. ಇಲ್ಲಿ ಯಾವ ಮಂತ್ರಶಕ್ತಿಯೂ ಇಲ್ಲ. ಜಾದುವೂ ಇಲ್ಲ. ಒಂದು ವೇಳೆ ಅವು ಇದ್ದರೆ, ದೇವರ ಆದೇಶ ಕೊನೆಯಲ್ಲ ಎಂದು ಅರ್ಥ. ಹೀಗೆ ಹೇಳತ್ತಾ ಗುರುಗಳು ಭಕ್ತಿಗೀತೆಯನ್ನು ಹಾಡಿದರು.

ನಾವು ಉಸಿರಿರುವವರೆಗೂ ನಮ್ಮ ಬದುಕು ನಮಗೆ ಗೊತ್ತಿಲ್ಲ. ನಮ್ಮ ಸಾವಿನ ದಿನ ಮತ್ತು ಸಮಯ ಕೂಡ ಗೊತ್ತಿಲ್ಲವೆಂದು ಗುರುನಾನಕರು ವಂಜಾರರ ಮುಂದೆ ಹೇಳಿ, ಯಾರು ನಮ್ಮ ಹುಟ್ಟುವಿನ ಒಡೆಯನಾಗಿದ್ದಾನೋ ನಾವು ಅವನ ಸೇವೆಯನ್ನು ಮಾಡೋಣವೆಂದು ಪ್ರಾರ್ಥಿಸಿದರು. ಆಗ ಆ ವಂಜಾರಗಳಿಗೆ ಸತ್ಯದ ಅರಿವಾಗಿ ಆ ಪಾಲಕರ ಮತ್ತು ಸಂಬಂಧಿಕರಲ್ಲಿ, ಹಿತೈಷಿಗಳಲ್ಲಿ, ಕುಟುಂಬದವರ ಮನಸ್ಸಿನಲ್ಲಿ ಶಾಂತಿ ನೆಲೆಸಲು ಗುರುಗಳು ಪ್ರಾರ್ಥಿಸಿದರು. ವಂಜಾರಗಳು ಅವರನ್ನು ಸ್ವಲ್ಪದಿನ ತಮ್ಮೊಂದಿಗೆ ಕಳೆಯಲು ವಿನಂತಿಸಿದರು. ಇದಕ್ಕೆ ಗುರುಗಳು ಒಪ್ಪಿ ಪ್ರತಿದಿನ ಮುಂಜಾನೆ, ಸಂಜೆ ಸತ್ಸಂಗವನ್ನು ನಡೆಸಿ ತಮ್ಮ ಉದ್ದೇಶವನ್ನು ಬೋಧಿಸಿದರು. ಅವಾಗಿನಿಂದ ಭಾಯಿ ಠಾಕೂರ್(ಗೋದುವಿನ ತಂದೆ ಮತ್ತು ಲಕ್ಕಿರಾಯ ವಂಜಾರನ ಅಜ್ಜ ) ಗುರುನಾನಕರ ಪಂಕ್ತಿಯನ್ನು ಸೇರಿದರು. ಅವಾಗಿನಿಂದ ಈ ಕುಟುಂಬ ಸಿಖ್ ಜಗತ್ತಿನ ಭಾಗವಾಗಿ ಎಲ್ಲಾ ಗುರುಗಳ ಸಮಯದಲ್ಲಿ ಸಿಖ್ ಪಂಥದ ಸೇವೆ ಮಾಡಿದರು. ಮತ್ತು ಸಿಖ್ ಸಾರ್ವಭೌಮತ್ವದ ಧ್ವಜವನ್ನು ಹಾರಿಸಿದ, ಸಿಖ್ ಸೇನಾಧಿಪತಿಯಾದ ಬಾಬ ಬಂಡಾಸಿಂಗ್ ಬಹುದ್ದೂರರು(1710) ಮತ್ತು ಮಿಸಲ್ಸ್ ನಾಯಕರ ಸೇವೆಯನ್ನು ಮಾಡಿದರು. ಆದ್ದರಿಂದ ಪಂಜಾಬ್, ಹರಿಯಾಣ, ಮಹಾರಾಷ್ಟ್ರದಲ್ಲಿ ಸಿಖ್ ಬಂಜಾರರು ಕಂಡುಬರುತ್ತಾರೆ. ಕರ್ನಾಟಕದ ಉತ್ತರ ಭಾಗದಲ್ಲಿ ಬೆರಳೆಣಿಕೆಯ ಸಿಖ್ ಬಂಜಾರರಿದ್ದಾರೆ.

ವಿವಿಧ ಧರ್ಮಗಳಲ್ಲಿ ಸಂಕರಗೊಳ್ಳುತ್ತಿರುವ ಬಂಜಾರ ಸಮುದಾಯದವರ ಪೈಕಿ ಕ್ರೈಸ್ತ ಮತ್ತು ಇಸ್ಲಾಂ ಬಂಜಾರರಿಗೆ ಕರ್ನಾಟಕದಲ್ಲಿನ ಪರಿಶಿಷ್ಟ ಜಾತಿ ಸ್ಥಾನಮಾನದ ಪ್ರಶ್ನೆ ಹುಟ್ಟಿದೆ. ಅದಕ್ಕೆ ಧಕ್ಕೆ ಬರಬಹುದೆಂದು ಸಂಕರಗೊಳ್ಳುತ್ತಿರುವ ಧರ್ಮವನ್ನು ಯಾವುದೇ ದಾಖಲಾತಿಗಳಲ್ಲಿ ತೋರಿಸುತ್ತಿಲ್ಲ. ಆದರೆ ಆಚರಣೆಯನ್ನು ಮಾಡುತ್ತಿದ್ದಾರೆ. 1956ರಿಂದ ನವೆಂಬರ್ 01ರಿಂದ ಹಿಂದೂ, ಬೌದ್ಧ ಮತ್ತು ಸಿಖ್ ಧರ್ಮ ಅನುಸರಿಸುತ್ತಿರುವವರಿಗೆ ಮೀಸಲಾತಿಯ ಯಾವುದೇ ಸಮಸ್ಯೆಯಿಲ್ಲ. ರಾಷ್ಟ್ರಪತಿಯವರ ಆದೇಶದಲ್ಲಿ ಉಲ್ಲೇಖವಿಲ್ಲದ ಕ್ರೈಸ್ತ ಮತ್ತು ಇಸ್ಲಾಂ ಮತಾಂತರಗೊಂಡ ಯಾವ ಸಮುದಾಯಕ್ಕೂ ಮೀಸಲಾತಿಯಿಲ್ಲ. ಈ ಬಗ್ಗೆ ಅಧ್ಯಯನ ಮಾಡಲು ನ್ಯಾ.ಬಾಲಕೃಷ್ಣನ್ ಆಯೋಗ ರಚನೆಗೊಂಡಿದ್ದು, ಅಧ್ಯಯನ ನಡೆಯುತ್ತಿದೆ. ಧರ್ಮ ಸಂಕರ ಸ್ವಾತಂತ್ರ್ಯಪೂರ್ವ ಪರಿಸ್ಥಿತಿಯೇ ಬೇರೆ ಸಂವಿಧಾನ ಕಾಲಘಟ್ಟದ ಪರಿಸ್ಥಿತಿಯೇ ಬೇರೆಯಿದೆ. ಇದು ಬಂಜಾರ ಸಮುದಾಯಕ್ಕೆ ಹೊರತಾಗಿಲ್ಲ.

## ಪರಾಮರ್ಶನ ಗ್ರಂಥಗಳು:

1. ಬಾಬಾ ಸಾಹೇಬ್ ಅಂಬೇಡ್ಕರ್, (2013), ಸಮಗ್ರ ಬರೆಹಗಳು ಮತ್ತು ಭಾಷಣಗಳು (ಸಂಪುಟ–12, ಭಾಗ–01), ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತು ಕುವೆಂಪು ಭಾಷಾ ಭಾರತಿ ಪ್ರಾಧಿಕಾರ.
2. ಬಾಬಾ ಸಾಹೇಬ್ ಅಂಬೇಡ್ಕರ್, (2013), ಸಮಗ್ರ ಬರೆಹಗಳು ಮತ್ತು ಭಾಷಣಗಳು (ಸಂಪುಟ–12, ಭಾಗ–02), ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತು ಕುವೆಂಪು ಭಾಷಾ ಭಾರತಿ ಪ್ರಾಧಿಕಾರ.
3. ಪೀಟರ್ ಫೆಡ್ರಿಕ್ ಮತ್ತು ಭಜನ್ ಸಿಂಘ, ರೀಟಾ ರೀನಿ (ಅನು), (2022), ಸಿಖ್ ಕ್ರಾಂತಿ, ಬೆಂಗಳೂರು: ಸಂಚಲನ ಪಬ್ಲಿಕೇಷನ್.
4. ನಾಯಕ ಡಿ.ಬಿ., ಹರಿಲಾಲ ಪವಾರ (ಸಂ), (2020), ಢಾಡಿ ಕಥನಗೀತೆಗಳು, ಹಾವೇರಿ (ಶಿಗ್ಗಾಂವಿ): ಕರ್ನಾಟಕ ಜಾನಪದ ವಿಶ್ವವಿದ್ಯಾಲಯ.
5. ಕೋಸಂಬಿ ಡಿ.ಡಿ., (2011), ಪ್ರಾಚೀನ ಭಾರತದ ಸಂಸ್ಕೃತಿ ಮತ್ತು ನಾಗರೀಕತೆ: ಚಾರಿತ್ರಿಕ ರೂಪುರೇಷೆ, ಬೆಂಗಳೂರು: ಚಿಂತನ ಪುಸ್ತಕ ಪ್ರಕಾಶನ.
6. ಇರ್ಫಾನ್ ಹಬೀಬ್, (2014), ಸಿಂಧೂ ನಾಗರೀಕತೆ, ಬೆಂಗಳೂರು: ಚಿಂತನ ಪುಸ್ತಕ ಪ್ರಕಾಶನ.
7. ಜೀನ್ ಪಾಲ್ ಸಾರ್ತ್ರ್, ನಾರಾಯಣ ಕೆ.ವಿ. (ಅನು), (2022), ಬುದ್ಧಿಜೀವಿ ಬಿಕ್ಕಟ್ಟುಗಳು, ಬೆಂಗಳೂರು: ಋತುಮಾನ.
8. ಕೃಷ್ಣಮೋಹನ್ ಶ್ರೀಮಾಲಿ, (2015), ಕಬ್ಬಿಣದ ಯುಗ ಮತ್ತು ಧಾರ್ಮಿಕ ಕ್ರಾಂತಿ (ಕ್ರಿ.ಪೂ 700ರಿಂದ 350), ಬೆಂಗಳೂರು: ಚಿಂತನ ಪುಸ್ತಕ ಪ್ರಕಾಶನ.
9. ಖಂಡೋಬಾ ಪಿ.ಕೆ., (2022), ಕರ್ನಾಟಕದ ಲಂಬಾಣಿಗಳು, ಬೆಂಗಳೂರು: ಸ್ನೇಹಾ ಪ್ರಿಂಟರ್ಸ್.
10. ಹರಿಲಾಲ ಪವಾರ್, (2007), ಬದುಕೊಂದು ಚಿತ್ತಾರ ಲಂಬಾಣಿ ಬುಡಕಟ್ಟು, ಧಾರವಾಡ: ಕರ್ನಾಟಕ ವಿಶ್ವವಿದ್ಯಾಲಯ.
11. ನಾಯಕ ಡಿ.ಬಿ., (2019), ಲಂಬಾಣಿ ಜನಪದ ಸಾಹಿತ್ಯ, ಹಾವೇರಿ (ಶಿಗ್ಗಾಂವಿ): ಕರ್ನಾಟಕ ಜಾನಪದ ವಿಶ್ವವಿದ್ಯಾಲಯ.
12. ಸಣ್ಣರಾಮ, (2015), ಲಂಬಾಣಿ ಸಂಸ್ಕೃತಿ, ಶಿವಮೊಗ್ಗ (ಸೊರಬ): ನೇಕಾರ ಪ್ರಕಾಶನ.
13. ನಾಗೇಗೌಡ ಹೆಚ್.ಎಲ್., (1977), ಪ್ರವಾಸಿಕಂಡ ಇಂಡಿಯಾ (ಸಂಪುಟ: 01ರಿಂದ 08), ಮೈಸೂರು: ಮೈಸೂರು ವಿಶ್ವವಿದ್ಯಾಲಯ (ಪ್ರಸಾರಾಂಗ).
14. ಭಾಂಗ್ಯಾ ಭುಕ್ಯಾ, ಡಾ. ಎನ್.ಎಸ್. ಜಾಧವ (ಅನು), (2021), ದಮನಿತ ಅಲೆಮಾರಿಗಳು–ನಿಜಾಮರ ಆಳ್ವಿಕೆಯಲ್ಲಿ ಲಂಬಾಣಿಗರು, ಹೈದರಾಬಾದ್: ಮಿಲಿಂದ ಪ್ರಕಾಶನ.
15. ಮಲ್ಲೇಪುರಂ. ಜಿ. ವೆಂಕಟೇಶ್ (ಸಂ), (1999), ಶಂಬಾ ಕೃತಿ ಸಂಪುಟ: ಕರ್ನಾಟಕ–ಸಂಸ್ಕೃತಿ (ಸಂಪುಟ: 01ರಿಂದ 04), ಬೆಂಗಳೂರು: ಕನ್ನಡ ಪುಸ್ತಕ ಪ್ರಾಧಿಕಾರ.
16. ವೀರಭದ್ರಪ್ಪ ಬಿ.ವಿ., (2016), ವೇದಗಳಲ್ಲಿ ಜನಸಾಮಾನ್ಯರು, ಬೆಂಗಳೂರು: ನವಕರ್ನಾಟಕ ಪ್ರಕಾಶನ.
17. S_Rhythms_R, (2021), ಸ್ಥಿತ್ಯಂತರ ಕಾಲ (ಲೇಖನ, ಪುಟ ಸಂ: 02), ಆನ್‌ಲೈನ್: ಸಂಪದ (https://sampada.net).
18. ಕಾರ್ ಇ.ಎಚ್., ಮಂಜುನಾಥ್ ಬಿ.ಆರ್. (ಅನು), (ವರ್ಷ ಲಭ್ಯವಿಲ್ಲ), ಚರಿತ್ರೆ ಎಂದರೇನು

(ಪುಟ ಸಂ: 16), ಬೆಂಗಳೂರು: ಕುವೆಂಪು ಭಾಷಾ ಭಾರತಿ ಪ್ರಾಧಿಕಾರ. (ಸೂಚನೆ: ಈ ಅನುವಾದಿತ ಪುಸ್ತಕದ ನಿಖರವಾದ ಪ್ರಕಟಣಾ ವರ್ಷ ಲಭ್ಯವಾಗಿಲ್ಲವಾದ್ದರಿಂದ 'ವರ್ಷ ಲಭ್ಯವಿಲ್ಲ' ಎಂದು ನಮೂದಿಸಲಾಗಿದೆ).

19. ಗೋವಿಂದ್ ರಾಥೋಡ್ (Govind Rathod), (2014), Part–4 Ancient History of Gor Banjaras (ಲೇಖನ, ಪುಟ ಸಂ: 01), ಆನ್‌ಲೈನ್: https://www.google.com/search?q=Banjara.com (https://banjara.com/ancient–history–of–gor–banjaras–part–4/).

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.